ಜನಪದ ಸೇವಕ


ಬೆಲೆ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೧೦ ಮಾರ್ಚ್-೨೦೧೦ ಸಂಚಿಕೆ-೮



ಗೊಂದಲಕ್ಕೆ ಇನ್ನೊಂದು ಹೆಸರು ಶಿಕ್ಷಣ ಕ್ಷೇತ್ರ

೧) ಗೊಂದಲಕ್ಕೆ ಇನ್ನೊಂದು ಹೆಸರು ಶಿಕ್ಷಣ ಕ್ಷೇತ್ರ ಪುಟ-೩

- ಸುರೇಂದ್ರ ಕೌಲಗಿ

ಸಮಾಜದ ಒಟ್ಟು ಹಿತ ಸಾಧನೆಗೆ ಸಾಧನವಾದ ಶಿಕ್ಷಣ ಕ್ಷೇತ್ರವು ನಾಯಕರ ಅನಿಶ್ಚಿತ, ಚಂಚಲಿತ ನೀತಿಯಿಂದಾಗಿ ಗೊಂದಲಮಯವಾಗಿದೆ. ಗೊಂದಲದ ವಿವರ ಈ ಲೇಖನದಲ್ಲಿದೆ.

೨) ಶಿಕ್ಷಣ : ಕೆಲ ಗಂಭೀರ ಚಿಂತನೆಗಳು ಪುಟ-೯

- ಗುಸ್ತೆವೋ ಎಸ್ತೆವಾ; ಮಧು ಎಸ್.ಪ್ರಕಾಶ್

ಪ್ರಚಲಿತ ಶಿಕ್ಷಣ ವ್ಯವಸ್ಥೆಯು ಬಗೆ - ಬಗೆಯ ವಿಚಾರಗಳಿಗೆ ಗ್ರಾಸವಾಗಿದೆ. ಶಿಕ್ಷಣ ಕ್ಷೇತ್ರದಲ್ಲಿ ಚಾಲ್ತಿಯಲ್ಲಿರುವ ವಿವಿಧ ಬಗೆಯ ಚಿಂತನೆಗಳ ವಿಶ್ಲೇಷಣೆಯನ್ನು ಈ ಲೇಖನ ಒಳಗೊಂಡಿದೆ.

೩) ಆರೋಗ್ಯದ ಗುಟ್ಟು ಪ್ರಕತಿಯಲ್ಲಿ, ಪಾಪದ ಮೂಲ ಸಂಗ್ರಹದಲ್ಲಿ ಪುಟ-೧೭

- ವಿನೋಬಾ

ಪ್ರಕೃತಿಯಲ್ಲಿಯೇ ಆರೋಗ್ಯ ರಹಸ್ಯಗಳಿವೆ. ಅವುಗಳನ್ನು ಮನುಷ್ಯ ತಿಳಿದುಕೊಳ್ಳಬೇಕು ಮತ್ತು ಮನುಷ್ಯ ಮಾಡುವ ಪಾಪದ ಮೂಲ ಮನುಷ್ಯನ ಸಂಗ್ರಹಣಾ ಬುದ್ಧಿಯಲ್ಲಿದೆ ಎಂಬ ವಿಷಯವಾಗಿ ವೇದದಲ್ಲಿರುವ ಮಾತನ್ನು ವಿನೋಬಾ ಇಲ್ಲಿ ಸರಳವಾಗಿ ಬಿಚ್ಚಿಟ್ಟಿದ್ದಾರೆ.

೪) ಗಾಂಧೀ ಮೈದಾನ ವಿವಾದಕ್ಕೆ ಒಳಗಾಯಿತು ಪುಟ-೨೩

- ಆಂಗ್ಲ : ಕೆ.ಜಿ.ಮಲ್ಯ ; ಕನ್ನಡ: ಲ.ನರಸಿಂಹಯ್ಯ

ಗಾಂಧೀ ಮೈದಾನಕ್ಕೆ ಆ ಹೆಸರು ಬರಲು ಮಹಾತ್ಮಾ ಗಾಂಧೀಯವರ ಹೆಸರೇ ಕಾರಣವಾಗಿದ್ದರೂ ನಿಜ ಗಾಂಧಿಯನ್ನು ತಿಳಿಯದ ಸದಸ್ಯರು ಚರ್ಚಿಸುವ ಹಾಸ್ಯಾಸ್ಪದ ಮಾತುಗಳು ಈ ಕಥಾ ಲೇಖನದಲ್ಲಿವೆ.

೫) ಜನಪದ ಸೇವಾ ಟ್ರಸ್ಟ್ ಸಮಾಚಾರ ಪುಟ-೩೦

೬) ಜನಪದ ನಿಲಯದ ಅಂತರಂಗದಲ್ಲಿ..........೭೬ ಪುಟ-೩೧

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಮಾರ್ಚ್ - ೨೦೧೦
ಸಂಪುಟ - ೧೦
ಸಂಚಿಕೆ - ೮

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧೪೩೧
ಜಿಲ್ಲಾ ಮಂಡ್ಯ

✆08236 316344

e-mail : janapada@yahoo.com
web: janapada.net

ನನ್ನ ಚಪ್ಪಲಿಗಳಿಗೆ

ಇಷ್ಟು ಭಾರಹೊತ್ತು, ಇಷ್ಟು ದೂರತಂದ
ಈ ಚಪ್ಪಲಿಗಳಿಗೆ, ನನ್ನ ವಂದನೆಗಳು.

ತಲೆಯ ಯೋಚನೆಗಳ, ಕಣ್ಣ ನೋಟಗಳ
ಕಿವಿಯ ನೂರು ಮಾತುಗಳ
ಎಂದೂ ಕೇಳದೆ, ಕಾಣದೆ
ನೆಲನೆಕ್ಕಿ ಬದುಕಿದ ನಿಮ್ಮ ರೀತಿಗೆ
ಪ್ರೀತಿಯ ಅಭಿನಂದನೆಗಳು.

ಹೊರ ಬಿಟ್ಟು ನಿಮ್ಮನು,
ನೂರು ಕಾರುಬಾರು ಮಾಡಿದಾಗ,
ಯಾಕೆಂದು, ಏನೆಂದು, ಎಂದೂ ಕೇಳದೆ,
ಮತ್ತೆ ಹೊತ್ತು ನಡೆವ ನಿಮ್ಮ
ಹೆಗಲುಗಳಿಗೆ ಜನುಮ ಜನುಮದ ನಮನಗಳು.

ದೊಡ್ಡವರು ಬಂದಾಗ, ಸಣ್ಣವರು
ನಿಂತಾಗ,
ನೆಲಮಣೆಯ ಮೇಲೆ ನಿಂತ,
ನನ್ನ ಮೌನ ಸಂಗಾತಿಗಳೆ,
ನಿಮಗಿದೋ ಸಾವಿರದ ಶರಣು.

ಮುಳ್ಳು ಹಾದಿಯಲಿ, ಕಲ್ಲು ದಾರಿಯಲಿ
ಹೊಲಸು ಹೇಸಿಗೆ ತುಳಿದರೂ
ನಸು ನಕ್ಕು, ತುಸು ಬೇಸರವೂ ತೋರದ
ನನ್ನ ಕಾಲುಮರಿಗಳೆ, ನಿಮಗೆ ನಾನು ಸರಿಯೆ?

ಕಣ್ಣುಗಳು ಕಿತ್ತಾಗ, ಬಗಲು ಬದಿಗಳು ಹರಿದಾಗ,
ಎದೆಗೆ ಮುಳ್ಳುಗಳು ನೆಟ್ಟಾಗ
ಅಳದೆ ನಗದೆ ಏನನ್ನೂ ಹೇಳದೆ
ಮೋಚಿ ಮೊಳೆಗೆ, ಮತ್ತೆ ಮೊಳೆತು
ಬೆನ್ನಟ್ಟಿ ಓಡಿ ಬಂದ, ಬಡ ಮೋಚಿಯಾ
ಜೋಡಿ ಮಕ್ಕಳೆ, ನಿಮಗೆ ನಾ ಕೈಮುಗಿವೆ.

- ಸತೀಶ ಕುಲಕರ್ಣಿ

ವಿಚಾರ ದೀಪ್ತಿ

ಚೆನ್ನೈ ನಗರದ ಕೇಂದ್ರಭಾಗದಲ್ಲಿದ್ದ ಐವತ್ತಕ್ಕೂ ಹೆಚ್ಚು ಸ್ಲಂಗಳನ್ನು ತೆರವುಗೊಳಿಸಿದ ಸರ್ಕಾರ, ಒಕ್ಕಿಯಂ, ತುರೈಪಾಕ್ಕಂ ಮತ್ತು ಕನ್ನಗಿ ನಗರ ಪ್ರದೇಶಗಳಲ್ಲಿ ಕಟ್ಟಿರುವ ಸ್ಲಂ ಬೋರ್ಡ್‌ನ ಬಹುಮಹಡಿ ವಸತಿ ಸಮುಚ್ಚಯಗಳಲ್ಲಿ ಹದಿನೈದು ಸಾವಿರ ಕುಟುಂಬಗಳ ಒಂದು ಲಕ್ಷ ಜನರಿಗೆ ನಗರಕ್ಕೆ ಬಂದು ಹೋಗಲು ಕೇವಲ ಹದಿನೈದು ಬಸ್‌ಗಳನ್ನು ಬಿಡಲಾಗಿದೆ! ಸರ್ಕಾರಿ ಶಾಲೆಗಳಿದ್ದರೂ ಅದರಲ್ಲಿ ಟಿಚರ್‌ಗಳಿಲ್ಲ. ಪ್ರಾಥಮಿಕ ಆರೋಗ್ಯ ಕೇಂದ್ರಗಳಿಲ್ಲ, ಕುಡಿಯುವ ನೀರು ಸಿಗುವುದಿಲ್ಲ, ವಿದ್ಯುಚ್ಛಕ್ತಿ ಇದ್ದರೂ ಅರ್ಧ ದಿನ ಕತ್ತಲೆ. ಕಳೆದ ಹತ್ತು ವರ್ಷಗಳಲ್ಲಿ ಈ ಜನ ನಡೆಸಿದ ಹೋರಾಟಗಳಿಗೆ ಲೆಕ್ಕವಿಲ್ಲ. ಆದರೆ ಸರ್ಕಾರ ಯಾವುದಕ್ಕೂ ಕ್ಯಾರೆ ಎನ್ನಲಿಲ್ಲ. ಹೋರಾಟಗಳನ್ನು ಮಾಡಿ ಈ ಜನ ಸುಸ್ತಾಗಿ ಹೋಗಿದ್ದಾರೆ. ಕಳೆದ ಜೂನ್ ತಿಂಗಳಿನಲ್ಲಿ ಎಂ.ಜಿ.ಆರ್. ನಗರದ ಗುಡಿಸಲುಗಳು ಬೆಂಕಿ ದುರಂತಕ್ಕೆ ಈಡಾದವು. ಒಂದೇ ವಾರದಲ್ಲಿ ಈ ಜನರಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸಲಾಗಿತ್ತಾದರೂ ಅದು ಯಾರು ವಾಸಮಾಡಲೂ ಯೋಗ್ಯವಲ್ಲದ ಕಾಡಿನಂಥ ನಿರ್ಜನ ಪ್ರದೇಶದಲ್ಲಿ. ಜನರು ಮಳೆಯಲ್ಲಿ ಜೇಡಿಮಣ್ಣಿನ ನೆಲದಲ್ಲಿ ಪಡಬಾರದ ಪಾಡು ಪಡಬೇಕಾಯಿತು. ಕೊನೆಗೆ ತಾಂಬರಂ ರೈಲು ನಿಲ್ದಾಣದ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಈ ಜನ ಆಶ್ರಯ ಪಡೆದರು. ಇದಕ್ಕಿಂತ ದುರಂತದ ಕತೆ ಪೆರೂರ್ ಕೆರೆಯಿಂದ ತೆರವುಗೊಳಿಸಿದ ಜನರದ್ದು. ಇವರಿಗೆ ತಲಾ ಒಂದು ಸೆಂಟ್ ಭೂಮಿಯನ್ನು ನೀಡಲಾಗಿದ್ದರೂ ಅದರಲ್ಲಿ ವಾಸಮಾಡಲಾಗದೇ ಹಳೆಯ ಜಾಗದಲ್ಲೇ, ಫುಟ್‌ಪಾತ್‌ಗಳಲ್ಲಿ ಗೋಣಿ ಚೀಲಗಳ ಟೆಂಟ್‌ಗಳಲ್ಲಿ ಈ ಜನ ವಾಸಮಾಡುತ್ತಿದ್ದಾರೆ. ಸ್ವಂತ ಭೂಮಿಯಲ್ಲಿ ಎರಡನೇ ದರ್ಜೆ ನಾಗರೀಕರಾಗಿರುವ ಜನರು ಸರ್ಕಾರಕ್ಕೆ ಹಿಡಿ ಶಾಪ ಹಾಕುತ್ತಾ, "ನಮ್ಮನ್ನು ಕಸದ ರೀತಿ ತಂದೆಸೆದು ಹೋದರು, ಇಲ್ಲಿ ಯಾವುದೇ ತರಹದ ಸೌಕರ್ಯಗಳಿಲ್ಲದೆ ದಿನಾ ಸತ್ತು ಬದುಕುವಂತಾಗಿದೆ ನಮ್ಮ ಬದುಕು" ಎಂದು ರೋದಿಸುತ್ತಿದ್ದಾರೆ.

ಗುಡಿಸಲುಗಳೇ ತುಂಬಿಕೊಂಡಿದ್ದ ಚನ್ನೈ ನಗರ ಇಂದು ಗುಡಿಸಲು ಮುಕ್ತವಾಗಿ ಬದಲಾಗುತ್ತಿದೆ. ನಗರದಲ್ಲಿ ಗುಡಿಸಲುಗಳೇ ಇಲ್ಲದ ವಾತಾವರಣ ಸೃಷ್ಟಿಸಲಾಗುವುದು. ಇದಕ್ಕಾಗಿ ಕೇಂದ್ರ ಸರ್ಕಾರ ೨೧೧ ಕೋಟಿಗಳನ್ನು ನೀಡಿದೆ. ಆದರೆ ಸುಂದರ ಚನ್ನೈ ನಗರವನ್ನು ಕಟ್ಟಲು ತಮ್ಮ ಬದುಕನ್ನೇ ಬಲಿ ನೀಡಿದ ಜನ ಇಂದು ಪಾದಚಾರಿ ಮಾರ್ಗಗಳಲ್ಲಿ ಕಾಲ ಕಳೆಯುತ್ತಿದ್ದಾರೆ.

– ಸ್ಲಂ ಜಗತ್ತು

* * *

ಗೊಂದಲಕ್ಕೆ ಇನ್ನೊಂದು ಹೆಸರು ಶಿಕ್ಷಣ ಕ್ಷೇತ್ರ

- ಸುರೇಂದ್ರ ಕೌಲಗಿ

ಇಂದಿನ ಶಿಕ್ಷಣ ಕ್ಷೇತ್ರವನ್ನು ಸಂತೆಗೊ, ಜಾತ್ರೆಗೊ ಹೋಲಿಸಬಹುದಾಗಿದೆ. ಭಾರತ ದೇಶ ಜಾತ್ರೆ ಮತ್ತು ಸಂತೆಗಳ ನಾಡು. ಇವುಗಳ ಸಂಖ್ಯೆ ಬಹು ದೊಡ್ಡದು ಮತ್ತು ವೈವಿಧ್ಯಮಯ. ಅಲ್ಲಿ ವ್ಯವಸ್ಥೆಗಿಂತ ಅವ್ಯವಸ್ಥೆಯೇ ಮುಖ್ಯ; ಸೇವೆಗಿಂತ ಸ್ವಾರ್ಥವೇ ಪ್ರಧಾನ; ಜನ ಮರುಳೋ ಜಾತ್ರೆ ಮರುಳೋ ಎಂಬುದೇ ಗೊತ್ತಾಗುವುದಿಲ್ಲ. ಜಾತ್ರೆ ಮತ್ತು ಸಂತೆಗಳು ತಮ್ಮ ಅಲ್ಪ ಕಾಲದ ಅಸ್ತಿತ್ವದ ಕಾರಣದಿಂದ ಅವು ಇವೆಯೆಂದರೆ ಇವೆ, ಇಲ್ಲವೆಂದರೆ ಇಲ್ಲ. ಆದರೂ ಅವುಗಳ ಅಸ್ತಿತ್ವವನ್ನು ಕಡೆಗಾಣಿಸುವಂತಿಲ್ಲ, ಮಹತ್ವವನ್ನು ಉದಾಸೀನ ಮಾಡುವಂತಿಲ್ಲ. ಇಂಥದೇ ಜಾತ್ರಾ ಪರಿಸ್ಥಿತಿ ಇಂದು ದೇಶದ ಶಿಕ್ಷಣ ಕ್ಷೇತ್ರದಲ್ಲಿ ಉಂಟಾಗಿದೆ. ಚುನಾವಣೆಯ ಕಾರಣದಿಂದ ಹೊಸ ಸರ್ಕಾರ ಬರುತ್ತದೆ. ಹೊಸ ಸರ್ಕಾರದಲ್ಲಿ ಹೊಸ ಶಿಕ್ಷಣ ಮಂತ್ರಿ. ಆ ಹೊಸ ಮಂತ್ರಿ ತನಗೆ ತೋರಿದ ರೀತಿಯಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಕುದುರೆಯನ್ನು ಓಡಿಸುತ್ತಾನೆ. ದಿನಕ್ಕೊಂದು ಹೊಸ ಪ್ರಯೋಗ ನಡೆಸುತ್ತಾನೆ. ಕೆಲವೊಂದು ಸಲ ತಾನು ಜಾರಿಗೆ ತಂದ ಸುಧಾರಣೆ ಎಂಬ ಪ್ರಯೋಗವನ್ನು ತಾನೇ ಬದಲಾಯಿಸಿಬಿಡುತ್ತಾನೆ. ಇಂಥ ಮಹಮ್ಮದ್ ಬಿನ್ ತುಘಲಕನ ರಾಜ್ಯಭಾರ ದೇಶ ಸ್ವಾತಂತ್ರ್ಯ ಪಡೆದಾಗಿನಿಂದಲೂ ಶಿಕ್ಷಣ ಕ್ಷೇತ್ರದಲ್ಲಿ ನಡೆಯುತ್ತ ಬಂದಿದೆ. ಮಾತೃಭಾಷೆ ಶಿಕ್ಷಣ ಮಾಧ್ಯಮವಾಗಬೇಕೆಂದು ಒಂದು ಸಲ ತೀರ್ಮಾನವಾದರೆ, ಇನ್ನೊಂದು ಸಲ ಇಂಗ್ಲಿಷನ್ನೂ ಜೊತೆಯಲ್ಲಿ ಬೋಧಿಸ ಬೇಕೆಂದು ತೀರ್ಮಾನವಾಗುತ್ತದೆ. ಒಂದು ಸಲ ರಾಷ್ಟ್ರಗೀತೆಯನ್ನು ಕಡ್ಡಾಯವಾಗಿ ಹಾಡಬೇಕೆಂದು ತೀರ್ಮಾನವಾದರೆ ಮಾರನೆ ದಿನ ಅದು ಐಚ್ಛಿಕವಾಗುತ್ತದೆ. ಒಂದು ಸಲ ಹತ್ತನೇ ತರಗತಿಯ ವರೆಗಿನ ಶಿಕ್ಷಣ ಪ್ರತ್ಯೇಕ ವ್ಯವಸ್ಥೆಯಲ್ಲಿ ಇರಬೇಕೆಂದು ಅಭಿಪ್ರಾಯವಾದರೆ, ಇನ್ನೊಂದು ಸಲ ಅದು ಪಿ.ಯು.ಸಿ. ಕಾಲೇಜುಗಳ ಅಂಗವಾಗುತ್ತದೆ. ಒಂದು ಸಲ ಮನೆಪಾಠ ಸಾಮಾನ್ಯವಾಗುತ್ತದೆ. ಇನ್ನೊಂದು ಸಲ ಅದು ಅಪರಾಧವಾಗುತ್ತದೆ. ಮೂಲಭೂತ ಸೌಕರ್ಯವಿಲ್ಲದ ಶಾಲೆಗಳಿಗೆ ಕಾಲೇಜುಗಳಿಗೆ ಮಾನ್ಯತೆ ಇಲ್ಲವೆಂದು ಘೋಷಣೆಯಾದರೆ, ಆ ಘೋಷಣೆಯ ಹಿಂದೆಯೇ ಯಾವುದೇ ಮೂಲಭೂತ ಸೌಕರ್ಯವಿಲ್ಲದೆ, ಅತ್ಯಂತ ಅಪಾಯದ ಸನ್ನಿವೇಶ ಹಾಗು ಶೈಕ್ಷಣಿಕವಾಗಿ ಯಾವುದೇ ರೀತಿಯಲ್ಲಿ ಪೂರಕವಾಗಿಲ್ಲದಿರುವ ಪರಿಸ್ಥಿತಿಯಲ್ಲಿಯೇ ಸರ್ಕಾರದ ಶಾಲಾ ಕಾಲೇಜುಗಳು ಮತ್ತು ಅನೇಕ ಖಾಸಗಿ ಶಾಲೆ ಕಾಲೇಜುಗಳು ನಡೆಯುತ್ತಿರುತ್ತವೆ. ಅಧ್ಯಾಪಕರ ವರ್ಗಾವಣೆಯಿಲ್ಲವೆಂಬ ಘೋಷಣೆಯ ಅರ್ಥ ಅವರ ವರ್ಗಾವಣೆ ಸಾಧ್ಯವಿದೆ ಎಂದೇ ಮಾಡಲಾಗುತ್ತದೆ. ವರ್ಗಾವಣೆ ಹೇಗೆ ಸಾಧ್ಯವಿಲ್ಲ ಮತ್ತು ಹೇಗೆ ಸಾಧ್ಯವೆಂಬುದು ಈ ಕ್ಷೇತ್ರದಲ್ಲಿರುವವರಿಗೇ ಗೊತ್ತು. ಒಂದು ವರ್ಷ ಸೆಮಿಸ್ಟರ್ ಪದ್ಧತಿಯಿರುತ್ತದೆ, ಇನ್ನೊಂದು ವರ್ಷ ಅದು ಮಾಯವಾಗಿರುತ್ತದೆ. ಪರಿಕ್ಷಾ ಕ್ರೇಂದ್ರದಲ್ಲಿ ನಡೆಯುವ ಅವ್ಯಹಾರಗಳಲ್ಲಿ ತೊಡಗಿರುವವರ ವಿರುದ್ಧ ಉಗ್ರ ಕ್ರಮ ಕೈಗೊಳ್ಳಲಾಗುವುದೆಂಬ ಭಯಂಕರ ಸ್ವರೂಪದ ಆದೇಶ, ಪರೀಕ್ಷೆ ಮುಗಿಯುವುದರೊಳಗೆಯೇ ಬೊಚ್ಚು ಬಾಯಿಯ ಆದೇಶವಾಗಿಬಿಡುತ್ತದೆ! ಕನ್ನಡ ಮಾಧ್ಯಮದ ಶಾಲೆಯೆಂದು ಅನುಮತಿ ಪಡೆದು ಇಂಗ್ಲಿಷ್

ಶಿಕ್ಷಣ ಕೊಡುವ ಶಾಲೆಗಳನ್ನು ಮುಚ್ಚಿಸಲಾಗುವುದೆಂಬ ಆದೇಶವಿದ್ದರೂ ಕಾನ್ವೆಂಟ್ ಎಂದು ಅನಧಿಕೃತವಾಗಿ ಕರೆಸಿಕೊಳ್ಳುವ ಇಂಗ್ಲಿಷ್ ಮಾಧ್ಯಮದ ಶಾಲೆಗಳು ನಾಯಿಕೊಡೆಗಳಂತೆ ತಲೆ ಎತ್ತುತ್ತಲೇ ಇರುತ್ತವೆ. ಅವು ಅಭಿವೃದ್ಧಿ ಹೊಂದುತ್ತಲೇ ಇರುತ್ತವೆ. ಇದೊಂದು ರೀತಿಯಲ್ಲಿ ಕಣ್ಣುಮುಚ್ಚಾಲೆ ಆಟವಾಗಿ ನಡೆದಿರುತ್ತದೆ. ಶಿಕ್ಷಣ ಕ್ಷೇತ್ರ ಪವಿತ್ರ ಕ್ಷೇತ್ರ ಎಂದು ಮುಂತಾದ ಘೋಷಣೆಗಳು, ಭಾಷಣಗಳು ಶಿಕ್ಷಕರ ದಿನಾಚರಣೆಯ ಸಂದರ್ಭದಲ್ಲಿ ಕೇಳಿ ಬರುತ್ತವೆ. ಆದರೆ ಶಿಕ್ಷಣ ಕ್ಷೇತ್ರದಲ್ಲಿಯ ಪರಿಸ್ಥಿತಿ ಬೆಕ್ಕು ಕಣ್ಣು ಮುಚ್ಚಿಕೊಂಡು ಹಾಲು ಕುಡಿಯುವಂಥಾದ್ದಾಗಿದೆ. ಆ ಪವಿತ್ರ ಕ್ಷೇತ್ರದಲ್ಲಿ ನಡೆಯುವಷ್ಟು ಭ್ರಷ್ಟಾಚಾರ, ಜಾತೀಯತೆ, ಧರ್ಮೀಯತೆ, ಹಣ ದಂಧೆ, ಶೋಷಣೆ, ಅನೈತಿಕತೆ, ರಾಜಕಾರಣ ಇತ್ಯಾದಿಗಳು ಬೇರೆ ಕ್ಷೇತ್ರಗಳಲ್ಲಿರುವಷ್ಟೇ ಇದೆ. ಯಾವುದೇ ರೀತಿಯಲ್ಲಿ ಭಿನ್ನವಾಗಿರುವುದಿಲ್ಲ. ಯು.ಜಿ.ಸಿ.ಯೇ ಮಾನ್ಯತೆ ಕೊಟ್ಟು, ಧನ ಸಹಾಯ ಮಾಡಿ, ಸಾವಿರಾರು ಎಕರೆ ಭೂಮಿ ದೊರೆಯುವಂತೆ ಮಾಡಿ, ಒಂದೊಂದು ವಿಷಯಕ್ಕೆ ಒಂದೊಂದು ವಿಶ್ವವಿದ್ಯಾನಿಲಯ ಸ್ಥಾಪಿಸಿ, ಒಂದೊಂದು ರಾಜ್ಯದಲ್ಲಿಯೂ ಕೇಂದ್ರೀಯ ವಿಶ್ವವಿದ್ಯಾನಿಲಯ ಪ್ರಾರಂಭಿಸಿ ಶಿಕ್ಷಣ ಕ್ಷೇತ್ರದಲ್ಲಿ ಏನೆಲ್ಲ ಕ್ರಾಂತಿಯನ್ನು ಮಾಡ ಹೊರಟ ಅದೇ ಯು.ಜಿ.ಸಿ. ತಾನು ಸ್ಥಾಪಿಸಿದ ವಿಶ್ವವಿದ್ಯಾನಿಲಯಗಳಿಗೇ ಸಮಾನಾಂತರವಾಗಿ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಡೀಮ್ಡ್ ಯುನಿವರ್ಸಿಟಿ ಎಂಬ ಹಣೆಪಟ್ಟಿ ಕೊಟ್ಟು ಶಿಕ್ಷಣ ಕ್ಷೇತ್ರವನ್ನು ಸಂತೆಯನ್ನಾಗಿ ಮಾಡಿತು, ಜಾತ್ರೆಯನ್ನಾಗಿ ಮಾಡಿತು. "ಹುಚ್ಚು ಮುಂಡೆ ಮದುವೆಯಲ್ಲಿ ಉಂಡವನೇ ಜಾಣ" ಎಂಬ ಗಾದೆ ಅಕ್ಷರಶಃ ಜಾರಿಗೆ ಬರುವಂತೆ ಮಾಡಿತು. ಮುಂದೆ ಕ್ಷಣಾರ್ಧದಲ್ಲಿ ಕೆಲ ಡೀಮ್ಡ್ ಯುನಿವರ್ಸಿಟಿಗಳ ಮಾನ್ಯತೆಯನ್ನು ರದ್ದುಮಾಡಿ ಅವು ಬೆತ್ತಲಾಗಿ ನಡು ಬೈಲಲ್ಲಿ ನಿಲ್ಲುವಂತೆ ಮಾಡಿತು; ಉಳಿದ ಯುನಿವರ್ಸಿಟಿಗಳಲ್ಲಿ ಚಳಿಯನ್ನುಂಟುಮಾಡಿತು.

ಸ್ವಾತಂತ್ರ್ಯ ಪೂರ್ವದಲ್ಲಿ ಭಾರತದಲ್ಲಿ ಗಾಂಧೀಜಿ, ರವೀಂದ್ರನಾಥ ಟಾಗೋರ್, ಅರವಿಂದ ಘೋಷ್, ಜೆ.ಕೃಷ್ಣಮೂರ್ತಿ, ಅನಿಬೆಸೆಂಟ್, ಸ್ವಾಮಿ ವಿವೇಕಾನಂದ, ಮದನ ಮೋಹನ ಮಾಳವೀಯ, ಆಚಾರ್ಯ ವಿನೋಬಾ ಭಾವೆ, ಡಾ.ಝಾಕೀರ್ ಹುಸೇನ್, ಮುಂತಾದ ಅನೇಕ ಶಿಕ್ಷಣ ಪ್ರೇಮಿಗಳು ಶಿಕ್ಷಣದ ಬಗ್ಗೆ ಬಹುವಾಗಿ ಚಿಂತನೆ ನಡೆಸಿ, ಪ್ರಯೋಗ ಮಾಡಿ ಶಿಕ್ಷಣದ ಗುರಿ ಮತ್ತು ವಿಧಾನಗಳ ಬಗ್ಗೆ ವಿಪುಲವಾದ ಸಾಹಿತ್ಯವನ್ನೇ ರಚಿಸಿದ್ದಾರೆ. ಇವರಿಗಿಂತಲೂ ಮೊದಲು ವೇದ-ಉಪನಿಷತ್ತು-ಸ್ಮೃತಿ-ರಾಮಾಯಣ ಮತ್ತು ಮಹಾಭಾರತಗಳಲ್ಲಿಯೂ ಶಿಕ್ಷಣದ ಬಗ್ಗೆ ಉದಾತ್ತ ವಿಚಾರಗಳು ಪ್ರಕಟಗೊಂಡಿವೆ. ಅನೇಕ ಋಷಿಗಳು-ಮುನಿಗಳು ಕೂಡ ಶಿಕ್ಷಣದ ಬಗ್ಗೆ ಬಹು ಅಮೂಲ್ಯವಾದ ವಿಚಾರಗಳನ್ನು ಜಗತ್ತಿನ ಮುಂದೆ ಇಟ್ಟಿದ್ದಾರೆ. ಅಲ್ಲದೆ, ಯುರೋಪ್ ಖಂಡದಲ್ಲಿ ಅನೇಕ ಶಿಕ್ಷಣ ತಜ್ಞರು ಶಿಕ್ಷಣವನ್ನು ಕುರಿತು ಅದ್ಭುತವಾದ ಚಿಂತನೆಗಳನ್ನು ಜಗತ್ತಿನ ಮುಂದೆ ಇಟ್ಟಿದ್ದಾರೆ. ಈ ವಿಚಾರದಲ್ಲಿ ಚೀಣಾ ಮತ್ತು ಜಪಾನ್ ದೇಶಗಳೂ ಹಿಂದೆ ಬಿದ್ದಿಲ್ಲ.

ಸ್ವಾತಂತ್ರ್ಯ ಬಂದ ಮೇಲೆ ಶಿಕ್ಷಣಕ್ಕೆ ಪ್ರಾಮುಖ್ಯತೆ ಬಂತು. ಅಲ್ಲಿ ಸುಧಾರಣೆಗಳನ್ನು ತರಲು ಆಯೋಗಗಳನ್ನು ರಚಿಸುವ ಪರಂಪರೆಯೇ ಪ್ರಾರಂಭವಾಯಿತು. ಡಾ.ರಾಧಾಕೃಷ್ಣನ್ ಆಯೋಗ, ಕೊಠಾರಿ ಆಯೋಗ ಹೀಗೆ ಪ್ರಾರಂಭವಾದ ಆಯೋಗಗಳ ಪರಂಪರೆ ಈಗ ರಾಜ್ಯ ಮಟ್ಟದಲ್ಲಿಯೂ, ರಾಷ್ಟ್ರಮಟ್ಟದಲ್ಲಿಯೂ ನಿರಂತರವಾಗಿ ನಡೆದುಕೊಂಡೇ ಬರುತ್ತಿದೆ. ಈಗ ರಾಷ್ಟ್ರೀಯ ಜ್ಞಾನ ಆಯೋಗಕ್ಕೆ, ಕಸ್ತೂರಿ ರಂಗನ್ ಶಿಕ್ಷಣ ಸಮಿತಿ ಮುಂತಾದವುಗಳ ಹಂತಕ್ಕೆ ತಲುಪಿದೆ.

ಸಾಮಾನ್ಯ ಶಿಕ್ಷಣ ಕ್ಷೇತ್ರದಲ್ಲಿ ಸೃಷ್ಟಿಯಾದ ಗೊಂದಲ ಈಗ ತಾಂತ್ರಿಕ ಶಿಕ್ಷಣ ಕ್ಷೇತ್ರಕ್ಕೂ ಪಸರಿಸಿದೆ. ತಾಂತ್ರಿಕ ಶಿಕ್ಷಣ ಕ್ಷೇತ್ರದಲ್ಲಿಯ ಅನೇಕ ಬೆಳವಣಿಗೆಗಳು ಸಾಮಾನ್ಯರಿಗೆ

ಅರ್ಥವಾಗುವುದಿಲ್ಲ. ತಾಂತ್ರಿಕ ಶಿಕ್ಷಣ, ವೈದ್ಯಕೀಯ ಶಿಕ್ಷಣ ಪಡೆದರೆ ತಮ್ಮ ಮಕ್ಕಳಿಗೆ ಉಜ್ವಲ ಭವಿಷ್ಯವಿದೆ, ಅವರು ಬಹಳಷ್ಟು ಹಣ ಸಂಪಾದನೆ ಮಾಡಿ ಸುಖವಾಗಿರ ಬಲ್ಲರೆಂಬ ಕಲ್ಪನೆಯನ್ನಿ, ಕನಸನ್ನಿ ಸಾಮಾನ್ಯರಲ್ಲಿ ಮೂಡಿದೆ. ಆದ್ದರಿಂದ ತಾವು ಎಷ್ಟೇ ಆರ್ಥಿಕವಾಗಿ ದುರ್ಬಲರಾಗಿದ್ದರೂ ತಮ್ಮ ಮಕ್ಕಳಿಗೆ ಹೇಗಾದರೂ ಮಾಡಿ ತಾಂತ್ರಿಕ ಅಥವಾ ವೈದ್ಯಕೀಯ ಶಿಕ್ಷಣ ಕೊಡಬೇಕೆಂಬ ಮಹತ್ವಾಕಾಂಕ್ಷೆಯನ್ನು ಸಾಮಾನ್ಯರು ಹೊಂದಿರುತ್ತಾರೆ. ಇಂಥ ಕಲ್ಪನೆ, ಇಂಥ ಕನಸು, ಇಂಥ ಮಹತ್ವಾಕಾಂಕ್ಷೆ ಗ್ರಾಮಾಂತರ ಪ್ರದೇಶದಲ್ಲಿಯ ಜನರಲ್ಲಿಯೂ ಮೂಡುತ್ತಿರುವುದರಿಂದ ಗ್ರಾಮೀಣ ಯುವಕರು ಜೀವನೋದ್ಧಾರದ ಇಂಥ ಶಿಕ್ಷಣ ಪಡೆಯಲು ಹಾಗೂ ಶಿಕ್ಷಣ ಪಡೆದ ನಂತರ ಹಣ ಸಂಪಾದಿಸಲು ನಗರಗಳಿಗೆ ವಲಸೆ ಹೋಗುತ್ತಿದ್ದಾರೆ. ಹೀಗಾಗಿ ಹಳ್ಳಿಗಳಲ್ಲಿಯ ವ್ಯವಸಾಯ ನೆಲಕಚ್ಚುತ್ತಿದೆ. ನೇಗಿಲ ಯೋಗಿಗಳಾಗಲು ಯಾರೂ ಮುಂದೆ ಬರುತ್ತಿಲ್ಲ. ಕಂಪ್ಯೂಟರ್ ಭೋಗಿಗಳಾಗಲು ಇಷ್ಟ ಪಡುತ್ತಿದ್ದಾರೆ.

ಸ್ವಾತಂತ್ರ್ಯ ಬಂದ ಮೇಲೆ ಶಿಕ್ಷಣ ಕ್ಷೇತ್ರದಲ್ಲಿಯ ಗೊಂದಲ ಅತ್ಯಂತ ಕೆಟ್ಟ ಪರಿಣಾಮ ಬೀರಿದ್ದು ಗ್ರಾಮಗಳ ಮೇಲೆ. ಗ್ರಾಮಗಳು ಪಾಳು ಬಿದ್ದವು, ವ್ಯವಸಾಯ ಭೂಮಿ ಪಾಳು ಬಿದ್ದಿತು. ವ್ಯವಸಾಯದ ಮೇಲೆ ಸೌಧಗಳು, ವಿಮಾನ ನಿಲ್ದಾಣಗಳು, ಕೈಗಾರಿಕೆಗಳು, ವಿಶಾಲವಾದ ಹೆದ್ದಾರಿಗಳು ಅವತರಿಸಿಕೊಂಡವು. ಕೃಷಿ ಭೂಮಿ ದಿನೇ ದಿನೇ ಕಡಿಮೆಯಾಗುತ್ತ ಬಂತು. ಇದರ ಪರಿಣಾಮವಾಗಿ ರಾಷ್ಟ್ರೀಯ ಆಹಾರ ಭದ್ರತಾ ಯೋಜನೆಗೆ ಬಲವಾದ ಏಟು ಬಿದ್ದಿತು. ಒಂದು ಕಾಲದಲ್ಲಿ ಅಹಾರದಲ್ಲಿ ಸ್ವಾವಲಂಬಿಯಾಗಿದ್ದ ಭಾರತ ಇದು ವಿದೇಶಗಳಿಂದ ಆಹಾರವನ್ನು ಆಮದು ಮಾಡಿಕೊಳ್ಳಬೇಕಾದ ದುಃಸ್ಥಿತಿಗೆ ಬಂದಿದೆ. ಜೊತೆಗೆ ರೈತರ ಆತ್ಮಹತ್ಯೆಯ ಪ್ರಕರಣಗಳು ಹೆಚ್ಚಾಗುತ್ತಲೇ ಇವೆ. ಆಹಾರ ಪಡಿತರ ಚೀಟಿಗಳನ್ನು ಪಡೆಯುವುದೇ ಒಂದು ದೊಡ್ಡ ಯಜ್ಞವಾದರೆ, ಆ ಪಡಿತರ ಚೀಟಿ ಮೂಲಕ ಸಾಕಷ್ಟು ಆಹಾರ ಪಡೆಯುವುದು ಇನ್ನೊಂದು ಮಹಾಯಜ್ಞವೆನಿಸುತ್ತದೆ. ಕೃಷಿ ತಜ್ಞರೇ ಹೇಳುವಂತೆ ದೇಶದಲ್ಲಿ ಆಹಾರ ಧಾನ್ಯಗಳ ಉತ್ಪಾದನೆ ಹೆಚ್ಚುತ್ತಿದ್ದರೂ ಸಾಮಾನ್ಯ ರೈತನ ಒಟ್ಟು ಆದಾಯ ಕಡಿಮೆ ಆಗುತ್ತಿದೆ.

ಶಿಕ್ಷಣ ಕ್ಷೇತ್ರದಲ್ಲಿ ಆಗಿರುವ ಅಥವಾ ಶಿಕ್ಷಣ ಕ್ಷೇತ್ರದಿಂದ ದೇಶದಲ್ಲಿ ಆಗಿರುವ ಇನ್ನೊಂದು ದೊಡ್ಡ ಗೊಂದಲವೇನೆಂದರೆ ದೇಶದೊಳಗೆ ಪಾಶ್ಚಿಮಾತ್ಯ ಸಂಸ್ಕೃತಿಯನ್ನು ಮುಕ್ತವಾಗಿ ಆಮದು ಮಾಡಿಕೊಂಡದ್ದು. ಭಾರತ ದೇಶದ ಮಕ್ಕಳು ಮತ್ತು ಯುವಕರು ಪಾಶ್ಚಿಮಾತ್ಯ ನಾಗರಿಕತೆಯ ಮನೋಭಾವವನ್ನು ಬೆಳೆಸಿಕೊಂಡಿದ್ದಾರೆ. ಅವರ ಉಡುಪುಗಳು, ಆಹಾರ-ವಿಹಾರಗಳು, ವಿಚಾರಗಳು ಇತ್ಯಾದಿಗಳೆಲ್ಲವೂ ಪಾಶ್ಚಿಮಾತ್ಯ ರೀತಿಯದಾಗಿವೆ. ಪೂರ್ಣ ಮೈ ಮುಚ್ಚಿ, ಮರ್ಯಾದೆಯಿಂದ ಇರಬೇಕಾದ ಇಂದಿನ ವಿದ್ಯಾರ್ಥಿನಿಯರು, ವಿದ್ಯಾರ್ಥಿಗಳು ಸುಶಿಕ್ಷಿತ ಯುವತಿಯರು, ಯುವಕರು ಹೆಚ್ಚು-ಹೆಚ್ಚು ಮೈ ಪ್ರದರ್ಶನದತ್ತ, ಹೆಚ್ಚು-ಹೆಚ್ಚು ಪ್ರಾದೇಶಿಕತೆಯಿಂದ ದೂರಾಗುತ್ತ ಹೋಗುತ್ತಿದ್ದಾರೆ; ವ್ಯಸನಿಗಳಾಗುತ್ತಿದ್ದಾರೆ; ಹಿರಿಯರನ್ನು ಅಲಕ್ಷವಾಗಿ ಕಾಣುತ್ತಿದ್ದಾರೆ; ವೇಗದ ಮತ್ತು ಹಣದ ಉಪಯೋಗವನ್ನು ಸಮರ್ಥವಾಗಿ ಉಪಯೋಗಿಸಿಕೊಳ್ಳುವ ವಿಷಯದಲ್ಲಿ ವಿಫಲರಾಗುತ್ತಿದ್ದಾರೆ. ಸುಶಿಕ್ಷಿತರೆಂಬುವವರೇ ಭ್ರಷ್ಟರಾಗುತ್ತಿದ್ದಾರೆ, ಕಳ್ಳರಾಗುತ್ತಿದ್ದಾರೆ. ಇಲ್ಲಿ ಗಾಂಧೀಯವರು ಸಾಮಾನ್ಯ ಶಿಕ್ಷಣ ಕುರಿತು ಹೇಳಿದ ಮಾತನ್ನು ಸ್ಮರಿಸಿಕೊಳ್ಳಬಹುದು. ಅವರು ಇಂದಿಗೆ ನೂರು ವರ್ಷಗಳ ಹಿಂದೆ ಬರೆದಿದ್ದ "ಹಿಂದ್-ಸ್ವರಾಜ್" ಪುಸ್ತಕದಲ್ಲಿ ಈ ರೀತಿ ಅಭಿಪ್ರಾಯಪಟ್ಟಿದ್ದಾರೆ, "ಒಬ್ಬ ರೈತ ಪ್ರಾಮಾಣಿಕತೆಯಿಂದ ತನ್ನ ಹಿಟ್ಟನ್ನು ಗಳಿಸುತ್ತಾನೆ. ಅವನಿಗೆ ಸಾಮಾನ್ಯ ಲೋಕಜ್ಞಾನವಿದೆ. ತನ್ನ ತಂದೆತಾಯಿಯ ಸಂಗಡ, ಹೆಂಡತಿ-ಮಕ್ಕಳ ಸಂಗಡ, ಗ್ರಾಮವಾಸಿಗಳ ಸಂಗಡ ಹೇಗೆ ನಡೆದುಕೊಳ್ಳಬೇಕು ಎಂಬುದು ಅವನಿಗೆ ಚೆನ್ನಾಗಿ ಗೊತ್ತು. ಸದಾಚಾರ ನೀತಿಗಳನ್ನು ಅವನು

ಬಲ್ಲ. ಅದರಂತೆ ನಡೆದೂ ನಡೆಯುತ್ತಾನೆ. ಆದರೆ ಅವನಿಗೆ ತನ್ನ ಹೆಸರು ಬರೆಯಲು ಬಾರದು. ಅಂಥವನಿಗೆ ಅಕ್ಷರಜ್ಞಾನ ನೀಡಿ ಏನು ಮಾಡ ಬೇಕೆನ್ನುತ್ತೀರಿ? ಅವನ ಸುಖಕ್ಕೆ ಒಂದು ಗುಂಜಿಯಷ್ಟಾದರೂ ಹೆಚ್ಚು ಸೇರಿಸಬಲ್ಲಿರಾ? ಅವನ ಗುಡಿಸಲು ಪರಿಸ್ಥಿತಿಗಳ ಬಗ್ಗೆ ಅವನಿಗೆ ಅತೃಪ್ತಿಯುಂಟು ಮಾಡಬೇಕೆ? ಹಾಗೆ ಮಾಡಲು ಈ ಶಿಕ್ಷಣವೇಕೆ ಬೇಕು?

ಇಂದಿನ ಶಿಕ್ಷಣದಲ್ಲಿಯ ಗೊಂದಲದಿಂದ ಹುಟ್ಟಿಬಂದಿರುವ ಪಾಪದ ಕೂಸು ಪತ್ರಿಕಾ ಮಾಧ್ಯಮ ಮತ್ತು ದೂರದರ್ಶನ ಮಾಧ್ಯಮ ಮತ್ತು ಚಲನಚಿತ್ರ ಮಾಧ್ಯಮ. ಈ ಮೂರೂ ಮಾಧ್ಯಮಗಳು ಸೇರಿ ಸಮಾಜವನ್ನು ಕೆಡಿಸುತ್ತಿವೆ. ಸಮಾಜದ ಆರೋಗ್ಯವನ್ನು ಹಾಳುಮಾಡುವುದೇ ಅವುಗಳ ಕಾಯಕವಾಗಿದೆ. ಈ ಮಾಧ್ಯಮಗಳಲ್ಲಿ ತೊಡಗಿರುವವರೆಲ್ಲ ಉಚ್ಚ ಶಿಕ್ಷಣ ಪಡೆದವರು, ಸುಸಂಸ್ಕೃತರೆಂದು ಕರೆಸಿಕೊಳ್ಳುವವರು. ಆದರೆ ಅವರು ತಮ್ಮ ಕೈಯಲ್ಲಿರುವ ಮಾಧ್ಯಮವ ನ್ನು ನೀಚ ಬುದ್ಧಿಯ ಪ್ರಚೋದನೆಗಾಗಿ ಅಸಭ್ಯವಾದ ಸಂಸ್ಕೃತಿಯನ್ನು ಹುಟ್ಟುಹಾಕಲು ಉಪಯೋಗಿಸುತ್ತಿದ್ದಾರೆ. ಶಿಕ್ಷಣ ಕ್ಷೇತ್ರದ ವ್ಯವಸಾಯ ಇದೇ ಎಂದು ಭಾವಿಸೋಣವೆ?

ಸ್ವತಂತ್ರ್ಯಗೊಂಡ ಮೇಲೆ ಭಾರತ ತನ್ನ ಸಂವಿಧಾನಕ್ಕೆ ಬೇಕಾದ ವಿಚಾರಗಳನ್ನು ನೂರೆಂಟು ದೇಶಗಳ ಸಂವಿಧಾನದಿಂದ ಪಡೆಯಿತು; ಅಭಿವೃದ್ಧಿಯ ನೀತಿಯನ್ನು ಪಾಶ್ಚಿಮಾತ್ಯರಿಂದ ಪಡೆಯಿತು; ಕೈಗಾರಿಕಾ ನೀತಿಯನ್ನು ಪಶ್ಚಿಮ ದೇಶಗಳಿಂದ ಕಾಪಿ ಮಾಡಿತು; ಆರ್ಥಿಕ ನೀತಿಯಲ್ಲಿ ಪಶ್ಚಿಮದ ಅನುಕರಣೆ ಮಾಡಿತು; ಶಸ್ತ್ರಾಸ್ತ್ರಗಳ ತಯಾರಿಕೆ ಮತ್ತು ಸಂಗ್ರಹದಲ್ಲಿ ಪಶ್ಚಿಮ ದೇಶಗಳನ್ನೇ ಅನುಸರಿಸಿತು; ತನ್ನ ತಾಟಸ್ಥ್ಯ ನೀತಿಯನ್ನು ಬದಿಗಿಟ್ಟು ಬಲಾಢ್ಯ ರಾಷ್ಟ್ರಗಳ ಹಿಂಬಾಲಕವಾಯಿತು. ಹೀಗೆಯೇ ಶಿಕ್ಷಣ ಕ್ಷೇತ್ರದಲ್ಲಿಯೂ ಪಶ್ಚಿಮ ದೇಶಗಳ ಅನುಕರನೆಯನ್ನೇ ಮಾಡಿತು.

ಭಾರತ ದೇಶ ಇಂದು ಎದುರಿಸುತ್ತಿರುವ ಎಲ್ಲ ಬಗೆಯ ಸಮಾಜಿಕ, ಆರ್ಥಿಕ, ರಾಜಕೀಯ ಸಮಸ್ಯೆಗಳಿಗೆ ಪರಿಹಾರ ಅದೇ ಶಿಕ್ಷಣ ಗೊಂದಲಮಯವಾದ ಶಿಕ್ಷಣ ಕ್ಷೇತ್ರದಿಂದಲೇ ದೊರೆಯಬೇಕಾಗಿ ಬಂದಿರುವುದು ದೌರ್ಭಾಗ್ಯ. ಆದರೆ ಹತಾಶಗೊಳ್ಳದೆ, ನಿರಾಶರಾಗದೆ ಪುರುಷಾರ್ಥಿಗಳಾಗಿ ಶಿಕ್ಷಣ ಕ್ಷೇತ್ರದಲ್ಲಿಯ ಗೊಂದಲವನ್ನು ನಿವಾರಿಸಬೇಕಾಗಿದೆ.

ಮುಳ್ಳಿನಿಂದಲೇ, ಮುಳ್ಳನ್ನು ತೆಗೆಯುವಂತೆ ಶೈಕ್ಷಣಿಕ ಗೊಂದಲದಿಂದ ಉಂಟಾದ ಸಮಸ್ಯೆಗಳನ್ನು ಶೈಕ್ಷಣಿಕವಾಗಿ ರಚನಾತ್ಮಕ, ದೃಷ್ಟಿಯಿಂದ ಸಮಾಜದ ಸಮಗ್ರ ಹಿತಚಿಂತನೆಯ ದೃಷ್ಟಿಯಿಂದ ಪರಿಹರಿಸುವ ಪ್ರಯತ್ನ ಮಾಡಬೇಕಾಗಿದೆ.

ಶಿಕ್ಷಣ ತಜ್ಞ ಪ್ರೊ. ಹಕ್ಸಲೆ ಶಿಕ್ಷಣ ಕುರಿತಾಗಿ ಹೇಳಿದ ಈ ಮಾತುಗಳು ಶಿಕ್ಷಣ ಕ್ಷೇತ್ರದಲ್ಲಿಯ ಗೊಂದಲದ ನಿವಾರಣೆಗೆ ಮಾರ್ಗದರ್ಶನವಾಗಬಲ್ಲದು :– "ತನ್ನ ದೇಹ ತನಗೆ ದಾಸನಾಗಿ, ಹೇಳಿದ ಕೆಲಸವನ್ನು ಸರಾಗವಾಗಿ, ಸಂತೋಷವಾಗಿ ಶಕ್ತಿಯಿದ್ದಷ್ಟು ಮಾಡುವಂತೆ ಯಾರಿಗೆ ತಾರುಣ್ಯದಲ್ಲಿ ಶಿಕ್ಷಣ ದೊರೆತಿದೆಯೋ: ಯಾರ ಬುದ್ಧಿ, ಶಾಂತ, ನ್ಯಾಯದರ್ಶಿಯಾಗಿದೆಯೋ; ಯಾರ ಮನಸ್ಸು, ಪ್ರಕೃತಿ ನಿಯಮಗಳ ಜ್ಞಾನದಿಂದ ಪೂರ್ಣವಾಗಿದೆಯೋ; ಯಾರ ಇಂದ್ರಿಯಗಳು ನಿಗ್ರಹಿತವೋ; ಯಾರ ಅಂತರಾತ್ಮ ಪರಿಶುದ್ಧವೋ; ಯಾರಿಗೆ ನೀಚಕಾರ್ಯವೆಂದರೆ ಹೇಸಿಗೆಯೋ; ಯಾರು ತನ್ನಂತೆಯೇ ಪರರನ್ನು ಕಾಣುತ್ತಾನೋ, ಅವನು ನಿಜವಾಗಿ ಶಿಕ್ಷಿತ".

ಇಂದಿನ ಶಿಕ್ಷಣ ಕ್ಷೇತ್ರ ಜಾತ್ರೆಯಾಗದೆ ಪರಮ ಗುರಿಯನ್ನು ಹೊಂದಿದ ಯಾತ್ರೆಯಾಗಲಿ.

* * *

ಜನಪದ ಧ್ವನಿ

ಕಳೆದ ತಿಂಗಳು ಶಿವಮೊಗ್ಗೆಯಲ್ಲಿ, ಇನ್ನೂರೈವತ್ತು ಎಕರೆ ಪ್ರದೇಶದಲ್ಲಿ, ಬೃಹತ್ ಸಿದ್ಧಉಡುಪು ತಯಾರಿಕಾ ಸಂಕೀರ್ಣವೊಂದನ್ನು, ಪಿ.ಪಿ.ಪಿ. ಮಾದರಿಯಲ್ಲಿ (ಅರ್ಥಾತ್ ಸಾರ್ವಜನಿಕ ಹಾಗೂ ಖಾಸಗಿ ಸಹಭಾಗಿತ್ವದ ಮಾದರಿಯಲ್ಲಿ) ರಾಜ್ಯ ಸರ್ಕಾರವು ಆರಂಭಿಸಿದೆ. ಕೆಲವು ವರ್ಷಗಳ ಹಿಂದೆ, ದೊಡ್ಡಬಳ್ಳಾಪುರದಲ್ಲಿ ಇದೇ ರೀತಿಯ ಸಂಕೀರ್ಣವೊಂದನ್ನು ರಾಜ್ಯ ಸರ್ಕಾರವು ಆರಂಭಿಸಿತ್ತು. ಸಿದ್ಧಉಡುಪುಗಳ ಹೊಲಿಗೆ ಸಂಕೀರ್ಣಗಳು ಸಂಕಷ್ಟದಲ್ಲಿರುವ ಗ್ರಾಮೀಣ ನೇಕಾರರು ಹಾಗೂ ಹತ್ತಿ ಬೆಳೆಗಾರರ ನೆರವಿಗಾಗಿ ಕೈಗೊಳ್ಳುವ ಯೋಜನೆಗಳಾಗಿರುತ್ತವೆ. ದುರಂತವೆಂದರೆ, ಈ ಯೋಜನೆಗಳು ತನ್ನ ಮೂಲ ಉದ್ದೇಶವನ್ನು ಈಡೇರಿಸುವಲ್ಲಿ ಸಂಪೂರ್ಣವಾಗಿ ಸೋತಿವೆ. ಕೈಮಗ್ಗ ನೇಕಾರರ ಹೆಸರಿನಲ್ಲಿ ಉದ್ಯಮಿಗಳು ಹಾಗೂ ಮಾರಾಟಗಾರರು ಸರಕಾರದ ಹಣವನ್ನು ದೋಚುತ್ತಿರುವುದು ವಿಷಾದನೀಯ. ಅಪ್ಪಾರೆಲ್ ಪಾರ್ಕುಗಳಲ್ಲಿ ಬಳಕೆಯಾಗುವುದು ಸಂಪೂರ್ಣವಾಗಿ ಮಿಲ್ ಬಟ್ಟೆ, ಸಿಂಥೆಟಿಕ್ ಬಟ್ಟೆ ಹಾಗೂ ಪವರ್ ಲೂಮಿನ ಬಟ್ಟೆಗಳಾಗಿರುತ್ತವೆ, ಮಾತ್ರವಲ್ಲ ಅವುಗಳನ್ನೇ ಕೈಮಗ್ಗದ ಸಿದ್ಧ ಉಡುಪುಗಳೆಂದು ಬಿಂಬಿಸಿ ಮಾರಾಟ ಮಾಡಲಾಗುತ್ತಿದೆ.

ನಮ್ಮ ದೇಶದಲ್ಲಿ, ಕೈಮಗ್ಗದ ಹೆಸರಿನಲ್ಲಿ ಮಾರಾಟವಾಗುತ್ತಿರುವ ಒಟ್ಟು ಬಟ್ಟೆಯಲ್ಲಿ ಎಪ್ಪತ್ತು ಪ್ರತಿಶತ ಬಟ್ಟೆಯು ಮಿಲ್ಲುಗಳು ಹಾಗೂ ಪವರ್‌ಲೂಮಿನ ಕಲಬೆರಕೆ ಬಟ್ಟೆಯಾಗಿರುವುದು ದುರಂತವಾಗಿದೆ. ಈ ಕಲಬೆರಕೆಯನ್ನು ತಡೆಯದೆ ನೇಕಾರರ ಆತ್ಮಹತ್ಯೆಯನ್ನು ತಡೆಯುತ್ತೇವೆ ಎನ್ನುವುದು ಆಗದ ಮಾತು. ಕಲಬೆರಕೆ ಬಟ್ಟೆಯು ಮಾರುಕಟ್ಟೆಯಲ್ಲಿ ಹತ್ತರಿಂದ ಇಪ್ಪತ್ತು ಪ್ರತಿಶತ ಕಡಿಮೆ ಬೆಲೆಗೆ ಸಿಕ್ಕುತ್ತಿದೆ ಎಂಬುದು ನಿಜ. ಆದರೆ ಆ ಇಪ್ಪತ್ತು ಪ್ರತಿಶತ ವ್ಯತ್ಯಾಸವನ್ನು ಭರಿಸಲಿಕ್ಕೆ ಕೇಂದ್ರ ಹಾಗೂ ರಾಜ್ಯ ಸರಕಾರಗಳ ಕೈಮಗ್ಗ ಮಾರಾಟ ಉತ್ತೇಜನ ಯೋಜನೆಯು ಈಗಾಗಲೇ ಲಭ್ಯವಿದೆ. ಶುದ್ಧ ಕೈಮಗ್ಗ ಹಾಗೂ ಶುದ್ಧ ಖಾದಿ ಸಿದ್ಧಉಡುಪುಗಳನ್ನು ಮುಕ್ತ ಮಾರುಕಟ್ಟೆಗೆ ಬಿಡುಗಡೆ ಮಾಡುವ ಮೂಲಕ ಕಲಬೆರಕೆ ವ್ಯಾಪಾರವನ್ನು ತಪ್ಪಿಸಿ ಎಂದು ನಾವು ರಾಜ್ಯ ಸರ್ಕಾರವನ್ನು ಒತ್ತಾಯಿಸುತ್ತೇವೆ.

ಎಲ್ಲ ಪಿ.ಪಿ.ಪಿ. ಮಾದರಿಯ ಸಿದ್ಧಉಡುಪು ತಯಾರಿಕಾ ಸಂಕೀರ್ಣಗಳಲ್ಲಿ ಹತ್ತಿ ಕೈಮಗ್ಗ ಹಾಗೂ ಖಾದಿ ಬಟ್ಟೆ ಮಾತ್ರವೇ ಬಳಕೆಯಾಗಬೇಕು ಎಂಬುದು ನಮ್ಮ ಬೇಡಿಕೆಯಾಗಿದೆ. ಇದು ಭಾವನಾತ್ಮಕ ಬೇಡಿಕೆ ಮಾತ್ರವೇ ಆಗಿರದೆ ವಾಣಿಜ್ಯ ದೃಷ್ಟಿಯಿಂದ ಕೂಡ ಸಾಧುವಾದ ಕ್ರಮವಾಗಿದೆ. ಕೈಮಗ್ಗದ ಸಿದ್ಧಉಡುಪುಗಳು ರ್ರಾಯ ಹಾಗೂ ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಲಾಭದಾಯಕವಾಗಿ ಮಾರಾಟವಾಗುತ್ತಿವೆ.

ಈ ಹಿಂದೆ, ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮವು 'ಸೋಹಮ್' ಎಂಬ ಹೆಸರಿನಲ್ಲಿ ಹತ್ತಿ ಕೈಮಗ್ಗದ ಶರಟುಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದಾಗ, ಅವು

ಯಶಸ್ವಿಯಾಗಿ ಮಾರಾಟವಾಗಿವೆ. 'ದೇಸಿ' ಸಂಸ್ಥೆಯು ಮಾರಾಟ ಮಾಡುತ್ತಿರುವ ಹತ್ತಿ ಕೈಮಗ್ಗ ಹಾಗೂ ಖಾದಿಯ ಸಿದ್ಧಉಡುಪುಗಳು ದೇಶಾದ್ಯಂತ ಜನಪ್ರಿಯವಾಗಿವೆ ಹಾಗೂ ಲಾಭದಾಯಕವಾಗಿ ಮಾರಾಟವಾಗುತ್ತಿವೆ. ವಾರ್ಧಾ ಗಾಂಧಿ ಆಶ್ರಮದಲ್ಲಿ ತಯಾರಾಗುತ್ತಿರುವ ಖಾದಿ ಬಟ್ಟೆಯ ಹೆಚ್ಚಿನಂಶವು ವಿದೇಶಗಳಿಗೆ ರಫ್ತಾಗುತ್ತಿದೆ. ಫ್ಯಾಬ್ ಇಂಡಿಯಾದ ಯಶೋಗಾಥೆಯ ಬಗ್ಗೆ ತಾವು ಕೇಳಿರಲಿಕ್ಕೆ ಸಾಕು. ಇಂತಹ ಇನ್ನೂ ಹಲವು ಉದಾಹರಣೆಗಳು ನಮ್ಮ ಮುಂದಿವೆ.

ವಿದೇಶಗಳಲ್ಲಿ ಅಪ್ಪಟ ಹತ್ತಿ ಕೈಮಗ್ಗ ಹಾಗೂ ಖಾದಿ ಬಟ್ಟೆಗಳಿಗೆ ವರ್ಷೇ ವರ್ಷೇ ಬೇಡಿಕೆ ಹೆಚ್ಚುತ್ತಿದೆ. ಅಪ್ಪಟ ಹತ್ತಿ ಕೈಮಗ್ಗದ ಬಟ್ಟೆಯನ್ನು ದೊಡ್ಡಪ್ರಮಾಣದಲ್ಲಿ ತಯಾರಿಸಬಲ್ಲ ಶಕ್ತಿಯಿರುವುದು ಭಾರತ ದೇಶಕ್ಕೆ ಮಾತ್ರ. ಈಗಲೂ ನಮ್ಮ ದೇಶದಲ್ಲಿರುವ ಮಗ್ಗಗಳ ಸಂಖ್ಯೆಯು, ವಿಶ್ವದ ಮಿಕ್ಕೆಲ್ಲ ದೇಶಗಳ ಕೈಮಗ್ಗಗಳಿಗಿಂತ ಹೆಚ್ಚಿನದ್ದಿದೆ. ಪದಾರ್ಥಕ್ಕೆ ಬೇಡಿಕೆಯಿದೆ, ಬೇಡಿಕೆಯನ್ನು ಪೂರೈಸುವ ಸಾಮರ್ಥ್ಯವೂ ನಮಗಿದೆ, ಈ ಯೋಜನೆಯ ಮೂಲಕ ಗ್ರಾಮೀಣ ಜನರಿಗೆ ಉದ್ಯೋಗ ಒದಗಿಸಿದ ಕೀರ್ತಿ ರಾಜ್ಯ ಸರ್ಕಾರಕ್ಕೆ ದಕ್ಕುತ್ತದೆ.

ಸಿದ್ಧಉಡುಪುಗಳ ತಯಾರಿಕಾ ಸಂಕೀರ್ಣಕ್ಕಾಗಿ ಕೊಡಮಾಡಲಾಗಿರುವ ಇನ್ನೂರ ಐವತ್ತು ಎಕರೆ ಭೂಮಿಯು ಕೃಷಿ ಭೂಮಿಯಾಗಿರುತ್ತದೆ. ರೈತನ ಭೂಮಿಯು ಗ್ರಾಮೀಣ ಉದ್ದಿಮೆಗೆ ಪೂರಕವಾಗಬೇಕು. ಶಿವಮೊಗ್ಗೆಯ ಸಿದ್ಧಉಡುಪು ತಯಾರಿಕಾ ಸಂಕೀರ್ಣವು ನೇಕಾರರು ಹಾಗೂ ರೈತರ ಹಿತ ಕಾಪಾಡಬೇಕು ಎಂದು ನಾವು ನಿರೀಕ್ಷಿಸುತ್ತೇವೆ. ತಾವು ನೇಕಾರರು ಹಾಗೂ ಹತ್ತಿ ಬೆಳೆಗಾರರ ನ್ಯಾಯಯುತವಾದ ಈ ಬೇಡಿಕೆಯನ್ನು ಈಡೇರಿಸುತ್ತೀರಿ ಎಂದು ನಾವು ನಿರೀಕ್ಷಿಸುತ್ತೇವೆ.

– ಪ್ರಸನ್ನ, ಹೆಗ್ಗೋಡು

ಸನ್ಮಾನ್ಯರಿಂದ...

ಜನೆವರಿ ಸಂಚಿಕೆಯಲ್ಲಿ ನನ್ನ ಕನಸಿನ ಭಾರತವನ್ನು ಹಾಳುಗೆಡಹದಿರಿ, ಎಂಬ ಲೇಖನ ಬಂಡವಾಳಶಾಹಿಗಳ ಬಣ್ಣವನ್ನು ಬಯಲುಗೊಳಿಸಿದರೆ ಶಾರದ ಪ್ರಸಾದರವರ ಸತ್ಯನ್ ಮತ್ತು ಕ್ಯಾಮರಾ, ಸಿ.ವಿ.ರಾಮನ್‌ನೊಂದಿಗೆ ಒಂದು ನಿಮಿಷ ಮುಂತಾದ ಲೇಖನಗಳು ನನ್ನ ಮನಸ್ಸಿಗೆ ಒಪ್ಪಿಗೆ ಯಾದವು. ವಿನೋಬಾರವರು ವೇದದಲ್ಲಿಯ ಮಾತುಗಳನ್ನು ಹೃದಯಂಗಮವಾಗಿ ಬಣ್ಣಿಸಿದ್ದಾರೆ.

– ಅರ್ಜುನಪುರಿ ಅಪ್ಪಾಜಿಗೌಡ; ಮದ್ದೂರು

ಜನಪದ ವಿಚಾರವನ್ನು ಮುನ್ನಡೆಸಿ, ಒಳ್ಳೆಯದಾಗಲಿ ಎಂದು ಆಶಿಸುತ್ತೇನೆ.

– ಸಿ.ಎಸ್. ನಾರಯಣರಾವ್, ಬೆಂಗಳೂರು

ಶಿಕ್ಷಣ; ಕೆಲ ಗಂಭೀರ ಚಿಂತನೆಗಳು

– ಗುಸ್ತೆವೋ ಎಸ್ತೆವಾ ಮತ್ತು ಮಧು ಎಸ್.ಪ್ರಕಾಶ್ – ಕನ್ನಡಕ್ಕೆ : ಅಕ್ಷರ.ಕೆ.ವಿ

ಶಿಕ್ಷಣಯುಗದ ಅಂತ್ಯಕಾಲದ ಆರಂಭವು ಈಗಾಗಲೇ ಮೊದಲುಗೊಂಡಿದೆ. ಪರಿಣತರ ಮಾತು ಕೇಳುವುದಾದರೆ, ಶಿಕ್ಷಣ ಕ್ಷೇತ್ರದ ಸ್ಥಿತಿ ಇನ್ನೂ ಹದಗೆಡುವುದಕ್ಕಾಗದಷ್ಟು ಹೀನವಾಗಿದೆ. ಶಿಕ್ಷಣಕ್ರಮಗಳು ಕೆಟ್ಟದಾಗಿ ಕಲಿಸುತ್ತವೆ, ಜತೆಗೆ, ಅಲ್ಲಿ ಸಿಗುವ ಬಡ ಸೀಮಿತ ಶಿಕ್ಷಣವೂ ನಿಷ್ಪ್ರಯೋಜಕವಾದದ್ದಾಗಿದೆ. ಶಿಕ್ಷಣವು ಜನರನ್ನು ಬದುಕಲಿಕ್ಕಾಗಲಿ ಅಥವಾ ಕೆಲಸ ಮಾಡಲಿಕ್ಕಾಗಲಿ ತಯಾರು ಮಾಡುತ್ತಿಲ್ಲ. ಆದ್ದರಿಂದ ಶಿಕ್ಷಣಕ್ಕೆ ಹತ್ತಿರುವ ಈ ಜಾಡ್ಯಕ್ಕೆ ತುರ್ತುಚಿಕಿತ್ಸೆಯ ಅಗತ್ಯವಿದೆಯೆಂದು ತಜ್ಞರು ಹೇಳುತ್ತಿದ್ದಾರೆ.

ಶಿಕ್ಷಣಕ್ಷೇತ್ರದ ಸುಧಾರಕರನ್ನು ಮೂರು ವರ್ಗಗಳಲ್ಲಿ ವಿಂಗಡಿಸಬಹುದು. ಅವರಲ್ಲಿ ಕೆಲವರು ಶಾಲಾಕೊಠಡಿಯ ವಾತಾವರಣವನ್ನು ಸುಧಾರಿಸಬೇಕೆಂದು ವಾದಿಸುವವರು– ಅಲ್ಲಿಯ ಪಠ್ಯಕ್ರಮಗಳು, ಉಪಕರಣಗಳು ಮತ್ತು ಜನರನ್ನು ಉತ್ತಮಪಡಿಸಬೇಕೆಂಬುದು ಇವರ ಇರಾದೆ. ಇನ್ನೂ ಕೆಲವರು, ಎಲ್ಲ ರೀತಿಯ ಅಧಿಕಾರಶಾಹಿ ಆಳ್ವಿಕೆಯಿಂದ ಶಿಕ್ಷಣವನ್ನು ಬಿಡುಗಡೆಗೊಳಿಸಬೇಕೆಂದು ಬಯಸುವವರು– ಆಯಾ ಸಮುದಾಯದ ಪೋಷಕರು ಮತ್ತು ಮಕ್ಕಳೇ ತಮ್ಮ ಶಿಕ್ಷಣದ ತಥ್ಯ ಹೇಗಿರಬೇಕೆಂದು ನಿರ್ಧರಿಸಿಕೊಳ್ಳಬೇಕು ಎಂಬುದು ಅವರ ವಾದದ ತಿರುಳು. ಮತ್ತೂ ಕೆಲವರು, ಇಡಿಯ ಸಮಾಜವನ್ನೇ ಪರಿವರ್ತಿಸಿ ಅದನ್ನೊಂದು ಶಾಲೆಯಾಗಿ ಮಾರ್ಪಡಿಸಬೇಕೆನ್ನುವವರು– ಅವರ ಪ್ರಕಾರ ಹೊಸ ಅಂತರ್ಜಾಲ ತಂತ್ರಜ್ಞಾನಗಳು ಮುಚ್ಚಿದ ಬಾಗಿಲುಗಳ ತರಗತಿಗಳನ್ನು ಪಲ್ಲಟಗೊಳಿಸಬೇಕು ಹಾಗೂ ಆ ಮೂಲಕ ಮುಕ್ತ ಮಾರುಕಟ್ಟೆಯೂ ದೂರಶಿಕ್ಷಣವೂ ತೆರೆದುಕೊಳ್ಳಬೇಕು. ಸುಧಾರಿತ ಶಿಕ್ಷಣ, ಮುಕ್ತ ಶಿಕ್ಷಣ ಮತ್ತು ಜಾಗತಿಕವ್ಯಾಪ್ತಿಯುಳ್ಳ ಶಿಕ್ಷಣ– ಇವು ಶಿಕ್ಷಣ ಸುಧಾರಣೆಯ ಮೂರು ಕ್ರಮಾನುಗತ ಮೆಟ್ಟಿಲುಗಳು. ಆದರೆ, ಮೂಲತಃ ಈ ಮೂರೂ ಹಂತಗಳ ಉದ್ದೇಶವೇನೆಂದರೆ, ಹತೋಟಿಗೊಳಪಡುವ ಪ್ರಜೆಗಳನ್ನು ನಿರ್ಮಿಸುವ ಆಧುನಿಕ ಯುಗದ ಹತ್ಯಾರವಾಗಿರುವ ಶಿಕ್ಷಣವೆಂಬುದನ್ನು ಕಾಪಾಡುವುದೂ, ಹಾಗೂ ಅದು ದಿವಾಳಿಯಾಗದಂತೆ ಅದರ ಮೇಲೆ ಮತ್ತೂ ಮತ್ತೂ ಸಾಮಾಜಿಕ ನಿಯಂತ್ರಣವನ್ನೂ ಕಣ್ಗಾವಲನ್ನೂ ಬಲಪಡಿಸುವುದೇ ಆಗಿದೆ.

ಶಿಕ್ಷಣವೆಂಬುದು ಬೆಟ್ಟಗುಡ್ಡಗಳಷ್ಟೇ ಪ್ರಾಚೀನವಾದ್ದು– ಎಂಬೊಂದು ಮಿಥ್ಯೆಯನ್ನು ಶಿಕ್ಷಣಕಾರರು ಜಗತ್ತಿಗೇ ಶಿಕ್ಷಣಕೊಟ್ಟು ಕಲಿಸಿದ್ದಾರೆ. ಆದರೆ, ಶಿಕ್ಷಣವು ನಿಜವಾಗಿ ಸಂಪೂರ್ಣ ಆಧುನಿಕವಾದದ್ದು– ಅದು ಹುಟ್ಟಿದ್ದು ಬಂಡವಾಳಯುಗದ ಜೊತೆಗೆ, ಬಂಡವಾಳಶಾಹಿಯ ಉದ್ದೇಶವೇ ಅದರ ಉದ್ದೇಶ ಕೂಡಾ. ಗತಕಾಲದಲ್ಲಿಯೂ ಮತ್ತು ಈಗಲೂ ಕಲಿಯಲಿಕ್ಕೆ ಹಾಗೂ ಅಧ್ಯಯನ ಮಾಡಲಿಕ್ಕೆ ಲಭ್ಯವಿರುವ ಹತ್ತಾರು ಸಂಸ್ಥೆಗಳನ್ನು ನಾವು ಸಮೀಕರಿಸಿ ಅವೆರಡೂ ಒಂದೇ ಎಂದು

ಗುರುತಿಸತೊಡಗಿದರೆ, ಅದು ಗತಕಾಲವನ್ನು ವಸಾಹತೀಕರಣಗೊಳಿಸುವ ಪ್ರಯತ್ನವೇ ಹೊರತು ಮತ್ತೇನಲ್ಲ.

ಮಕ್ಕಳ ಶಿಕ್ಷಣವೆಂಬ ಉಲ್ಲೇಖ ಮೊದಲು ಕಾಣಿಸಿಕೊಳ್ಳುವುದು ೧೪೬೮ರ ಒಂದು ಫ್ರೆಂಚ್ ದಾಖಲೆಯಲ್ಲಿ. ೧೭ನೆಯ ಶತಮಾನದಲ್ಲಿ ಕೂಡಾ ಮಕ್ಕಳ ಶಿಕ್ಷಣವೆಂಬುದು ತುಂಬ ಹೊಸ ಸಂಗತಿಯೇ ಆಗಿತ್ತು. ಆ ಕಾಲದಲ್ಲೇ ಯುರೋಪಿನಲ್ಲಿ ಹೊಸದೊಂದು ನಂಬಿಕೆ ಉದ್ಭವಿಸಿತು– ಮನುಷ್ಯ ಹುಟ್ಟುತ್ತಲೇ ಮೂರ್ಖನಾಗಿ ಹುಟ್ಟಿದ್ದಾನೆ; ಮನುಷ್ಯನಿಗೆ ಶಿಕ್ಷಣ ಕೊಡದಿದ್ದರೆ ಅವನಲ್ಲಿ ಅಗತ್ಯ ಸಾಮರ್ಥ್ಯಗಳು ರೂಪುಗೊಳ್ಳುವುದು ಅಸಾಧ್ಯ– ಇದು ಆ ನಂಬಿಕೆ. ಅರ್ಥಾತ್ ಶಿಕ್ಷಣವೆಂಬುದು ಆಗ ಇದ್ದ ಬದುಕುವ ಅಗತ್ಯಸಾಮರ್ಥ್ಯಕ್ಕೆ ವಿರುದ್ಧಪದವಾಗಿ ವ್ಯಾಖ್ಯಾನಿತಗೊಂಡಿತು; ಕ್ರಿಶ್ಚಿಯನ್ ನಂಬಿಕೆಯಂತೆ ಮನುಷ್ಯರು ಹುಟ್ಟುತ್ತಲೇ ಹೊತ್ತು ತರುವ ಪಾಪಕ್ಕೆ ಅದು ಸಮಾನಂತರವಾಗಿ ಕಾಣಿಸಿಕೊಂಡಿತು.

ಸಮಾನತೆ ಮತ್ತು ನ್ಯಾಯಗಳ ಹೆಸರಿನಲ್ಲಿ ಎಲ್ಲ ಕಡೆಗಳಲ್ಲೂ ಶಿಕ್ಷಣವನ್ನು ಪ್ರೋತ್ಸಾಹಿಸಲಾಗುತ್ತದೆ. ಶಿಕ್ಷಣವೆಂಬುದು ಆಧುನಿಕ ಸಮಾಜದ ದಮನಕಾರಿ ಅಸಮಾನತೆಗಳಿಗೆಲ್ಲ ಮದ್ದು ಎಂಬಂತೆಯೂ ಅದನ್ನು ಬಿಂಬಿಸಲಾಗುತ್ತದೆ. ಆದರೆ, ಶಿಕ್ಷಣದ ಪರಿಣಾಮ ಮಾತ್ರ ಅದಕ್ಕೆ ತದ್ವಿರುದ್ಧ. ಪ್ರತಿಯೊಂದು ಸಮಾಜವೂ ಶಿಕ್ಷಣಕ್ಕಾಗಿ ತನ್ನ ಶಕ್ತಿಸಂಪನ್ಮೂಲಗಳನ್ನು ಎಷ್ಟೇ ವ್ಯಯಿಸಲಿ, ಆಯಾ ಸಮಾಜದ ಬಹುಸಂಖ್ಯಾತರು ಆ ಪ್ರಕ್ರಿಯೆಯ ತುದಿಯನ್ನು ಮುಟ್ಟುವಲ್ಲಿ ಸೋಲುತ್ತಾರೆ; ಮಾತ್ರವಲ್ಲ, ಅಂಥವರನ್ನು ಈ ಮನುಷ್ಯನಿರ್ಮಿತ ಸಮಾಜದಲ್ಲಿ ಅನರ್ಹರೆಂದು ಘೋಷಿಸಲಾಗುತ್ತದೆ. ಸದ್ಯಕ್ಕೆ ಕಾಣಸಿಗುವ ವರ್ಗ ವಿಭಜನೆಗಳಲ್ಲೆಲ್ಲ ಅತ್ಯಂತ ದಮನಕಾರಿಯಾದ ಒಂದು ವಿಭಜನೆಯನ್ನು ಶಿಕ್ಷಣವು ಸೃಷ್ಟಿಸುತ್ತದೆ. ಜನರನ್ನು ಅದು ಎರಡು ಗುಂಪುಗಳಾಗಿ ವಿಂಗಡಿಸುತ್ತದೆ– ಶಿಕ್ಷಿತರು ಮತ್ತು ಅಶಿಕ್ಷಿತರು, ಅಥವಾ ಅಗತ್ಯಕ್ಕಿಂತ ಕಡಿಮೆ ಶಿಕ್ಷಿತರು; ಅಂದರೆ, ಜ್ಞಾನಬಂಡವಾಳಶಾಹಿ ವ್ಯವಸ್ಥೆಯಲ್ಲಿ ಈ ಎರಡು ವರ್ಗಗಳು ಕ್ರಮವಾಗಿ ಜ್ಞಾನಬಂಡವಾಳಿಗರು ಮತ್ತು ಜ್ಞಾನದರಿದ್ರರು. ಈ ಹೊಸ ವರ್ಗ ಸಂಘರ್ಷದಲ್ಲಿ ಹೆಚ್ಚು ಜ್ಞಾನವನ್ನು ಬಳಸುವ ಜನವರ್ಗಕ್ಕೆ ಹೆಚ್ಚು ಮೌಲ್ಯ; ಸಮಾಜ ಅವರ ಮೇಲೆ ಸಾಕಷ್ಟು ಹಣಹೂಡಿ ಅವರನ್ನು ಮಾನವ ಸಂಪನ್ಮೂಲವಾಗಿ ರೂಪಿಸಿರುತ್ತದೆಯಾದ್ದರಿಂದ ಉತ್ಪಾದನಾ ಸಾಧನಗಳ ಬಹುಪಾಲೂ ಅವರಿಗಾಗಿಯೇ ಮೀಸಲು. ಅಂಥ ಶಿಕ್ಷಿತರು ಮತ್ರವೇ ಈ ಸಮಾಜದಲ್ಲಿ ಎಲ್ಲ ಅನುಕೂಲಗಳಿಗೆ ಹಕ್ಕುದಾರರಾಗುತ್ತಾರೆ; ಉಳಿದ ಬಹುಸಂಖ್ಯಾತರ ಪಾಲಿಗೆ ಉಳಿಯುವುದು ದಾರಿದ್ರ್ಯ ಮತ್ತು ಅನರ್ಹತೆಗಳು ಮಾತ್ರ.

ಶಿಕ್ಷಣ ಸಂಸ್ಥೆಗಳು ಕೊಡುವ ಸೇವೆಯಲ್ಲಿ ಅಡಗಿರುವ ಇಂಥ ತಾರತಮ್ಯವನ್ನು ಸಧ್ಯಕ್ಕೆ ಬದಿಗಿರಿಸಿ ನೋಡುವುದಾದರೂ ಕೂಡ, ಒಂದು ಅಂಶವಂತೂ ನಿಚ್ಚಳವಾಗಿ ಗೋಚರಿಸುತ್ತದೆ– ಎಲ್ಲ ಸಮಾಜಗಳಲ್ಲಿಯೂ ಈ ಶಿಕ್ಷಣದ ಫಲ ಒಂದೇ, ಅದು ಸಮಾಜದ ಬಹುಸಂಖ್ಯಾತರನ್ನು ಅನರ್ಹಗೊಳಿಸುವ ಒಂದು ಮಾರ್ಗ. ಯುನೆಸ್ಕೋದ ಅಂಕಿಅಂಶಗಳ ಪ್ರಕಾರ, ಇವತ್ತು ಮೊದಲ ತರಗತಿಗಳಿಗೆ ಪ್ರವೇಶ ಮಾಡುವ ಮಕ್ಕಳಲ್ಲಿ ಶೇಕಡಾ ೬೦ರಷ್ಟು ಮಂದಿ ತುದಿಮುಟ್ಟುವುದಿಲ್ಲ, ಮಾತ್ರವಲ್ಲ,

ಆಯಾ ದೇಶಗಳಲ್ಲಿ ಶಿಕ್ಷಿತರು ಅನ್ನಿಸಿಕೊಳ್ಳುವುದಕ್ಕೆ ಅಗತ್ಯವಾಗಿರುವ ಒಂದು ಸರಾಸರಿ ಮಟ್ಟಕ್ಕೂ ಅವರು ತಲುಪುವುದಿಲ್ಲ. ಆದ್ದರಿಂದ ಅವರು ಸದಾ ಹಿಂದುಳಿದವರೇ ಆಗಿ ಇರಬೇಕಾದ ಹಣೆಬರಹವನ್ನು ಮಾತ್ರ ಗಳಿಸಿಕೊಳ್ಳುತ್ತಾರೆ. ಅದೇ ಹೊತ್ತಿಗೆ ಸಮಾಜದ ಇನ್ನುಳಿದ ಅಲ್ಪಸಂಖ್ಯಾತ ವರ್ಗವು ಸುಮಾರು ೨೦-೩೦ ವರ್ಷಗಳ ತರಬೇತಿಯನ್ನು ಪಡೆಯುತ್ತ ಮುನ್ನಡೆಯುತ್ತದೆ.

ಇದಕ್ಕೆ ಪ್ರತಿಯಾಗಿ, ಶಿಕ್ಷಣಕ್ಷೇತ್ರವನ್ನು ಸುಧಾರಣೆ ಮಾಡಬೇಕೆಂಬ ಒತ್ತಡವು ಇಂದು ಅಪಾಯಕಾರಿ ಮಟ್ಟವನ್ನು ತಲುಪತೊಡಗಿದೆ. ಈ ಸುಧಾರಣಾಮಾರ್ಗದ ಹಿಂದಿರುವ ಪ್ರೇರಣೆಗಳು ಎರಡು ದಿಕ್ಕಿನವು- ಒಂದು, ಈ ಜಗತ್ತಿನ ಬಹುಪಾಲು ಜನರು ಅಶಿಕ್ಷಿತರೂ ಅಲ್ಪಶಿಕ್ಷಿತರೂ ಆಗುತ್ತಿದ್ದಾರೆಂಬ ಆತಂಕ ಮತ್ತು ಇನ್ನೊಂದು, ಶಿಕ್ಷಿತರಾದ ಬಹುತೇಕರಿಗೆ ಅವರಿಗೆ ಯಾವ ದಿಕ್ಕಿನ ಶಿಕ್ಷಣ ಕೊಡಲಾಗಿತ್ತೋ ಅದಕ್ಕೆ ಹೊಂದುವ ಉದ್ಯೋಗ ದೊರಕುತ್ತಿಲ್ಲ ಎಂಬ ಭಾವನೆ.

ಆದ್ದರಿಂದ, ಈ ಸುಧಾರಕರು ಸತತವಾಗಿ ಶಿಕ್ಷಣದ ವಸ್ತು ಮತ್ತು ವಿಧಾನಗಳನ್ನು ಕುರಿತು ಚರ್ಚೆಗಳನ್ನು ನಡೆಸುತ್ತಹೋಗುತ್ತಾರೆ. ಆದರೆ, ಅವರ ಅಭಿಪ್ರಾಯಭಿನ್ನತೆಗಳೇನೇ ಇರಲಿ, ಅವರ ಉದ್ದಿಶ್ಯದಲ್ಲಿ ಭಿನ್ನತೆಯಿಲ್ಲ- ಜನರು ಸರಿಯಾಗಿ ಬದುಕುವುದಕ್ಕೆ ಅವರಿಗೆ ಶಿಕ್ಷಣ ಕೊಡುವುದೊಂದೇ ಸೂಕ್ತಕ್ರಮ ಎಂಬ ಸಾಮಾಜಿಕ ಪೂರ್ವಾಗ್ರಹವೊಂದು ಅವರೆಲ್ಲರಿಗೂ ಸಮಾನವಾಗಿರುತ್ತದೆ. ಇಂಥ ಸನ್ನಿವೇಶದ ಫಲವಾಗಿ ಶಿಕ್ಷಣ ಎಂಬುದು ಜ್ಞಾನದ ಬಳಕೆಗೆ ಸಮಾನಾರ್ಥಕವಾದ ಪ್ರಕ್ರಿಯೆಯೂ ಆಗುವುದರಿಂದ, ಹೊಸ ಹೊಸ ತಲೆಮಾರುಗಳು ಇಂಥ ಶಿಕ್ಷಣವನ್ನು ಪಡೆಯುವ ಮೂಲಕ ಇದೇ ಜ್ಞಾನ-ವ್ಯಸನದ ಪೂರ್ವಾಗ್ರಹವಲಯಕ್ಕೆ ಸೇರುವುದಕ್ಕೂ ಕಾತರರಾಗಿ ಕಾಯತೊಡಗುತ್ತಾರೆ. ತಮ್ಮ ಜ್ಞಾನದ ಬಳಕೆಯ ಪ್ರಮಾಣ ಮತ್ತು ಪರಿಮಾಣವೇ ತಮ್ಮ ಯಶಸ್ಸಿಗೂ ದ್ಯೋತಕವೆಂದು ಈ ಹೊಸವರ್ಗದ ಜನ ತಿಳಿಯುತ್ತಾರೆ; ಮತ್ತು, ಈ ಜಗತ್ತಿನಿಂದ ಕಲಿಯುವುದಕ್ಕಿಂತಲೂ ಈ ಜಗತ್ತಿನ ಬಗ್ಗೆ ಕಲಿಯುವುದೇ ಹೆಚ್ಚು ಶ್ರೇಷ್ಠವೆಂದು ಕೂಡಾ ಅವರು ಭಾವಿಸತೊಡಗುತ್ತಾರೆ.

ಇವತ್ತಿನ ಶಿಕ್ಷಣ ಸುಧಾರಕರಲ್ಲಿ ಅತ್ಯಂತ ಅಪಾಯಕಾರಿಯಾದವರೆಂದರೆ ತರಗತಿಗಳ ಬದಲು ಜ್ಞಾನದ ಪೊಟ್ಟಣಗಳನ್ನು ವಿಸ್ತೃತವಾಗಿ ಹಂಚಲು ಬಯಸುವವರು; ಮತ್ತು ಆ ಮೂಲಕ ಜ್ಞಾನದ ಬಳಕೆಯೇ ಬದುಕಿ ಉಳಿಯಲು ಅತ್ಯಗತ್ಯವೆಂದು ಸಾಬೀತು ಮಾಡಲಿಕ್ಕೆ ಹವಣಿಸುವವರು. ಸಾಂಪ್ರದಾಯಿಕ ಶಿಕ್ಷಣ ಸುಧಾರಕರು ಇನ್ನೂ ಹೆಚ್ಚು ಸಂಖ್ಯೆಯ ಮತ್ತು ಇನ್ನೂ ಉತ್ತಮ ಗುಣಮಟ್ಟದ ಶಾಲೆಗಳನ್ನು ತರಬೇಕೆಂದು ಶಿಫಾರಸ್ಸು ಮಾಡುತ್ತಿದ್ದರೆ, ಅವರ ಈ ಹೊಸ ವಿರೋಧಿಗಳು, ಸಾಂಪ್ರದಾಯಿಕರೊಂದಿಗೆ ಪೈಪೋಟಿ ನಡೆಸುತ್ತ, ಓಟದಲ್ಲಿ ಅವರಿಗಿಂತಲೂ ಮುನ್ನಡೆ ಸಾಧಿಸತೊಡಗಿದ್ದಾರೆ. ಮಾತ್ರವಲ್ಲ, ತಾವು ಮಾತ್ರ ಯೋಜಿತ ಗುರಿಯನ್ನು ಮುಟ್ಟಬಲ್ಲೆವೆಂದೂ ಮತ್ತು ಸಮಾನ ಶಿಕ್ಷಣಾವಕಾಶವನ್ನು ತಮ್ಮ ಮಾರ್ಗದಿಂದ ಮಾತ್ರ ಸಾಧಿಸಲು ಸಾಧ್ಯವೆಂದೂ ಈ ಹೊಸ ಸುಧಾರಕರು ಸೂಚಿಸುತ್ತಿದ್ದಾರೆ.

ಈ ಹೊಸ ಸುಧಾರಕರೇನಾದರೂ ಯಶಸ್ವಿಯಾದರೆ, ಶಾಲೆಗಳನ್ನು ಅವರು ಪಲ್ಲಟಗೊಳಿಸಿ ಅದರ ಕಾರ್ಯಕ್ಷೇತ್ರ ಮತ್ತು ವ್ಯಾಪ್ತಿಯನ್ನು ವಿಸ್ತರಿಸಿದ ಹೊಸ

ಕ್ರಮಗಳನ್ನು ಜಾರಿಗೆ ತಂದಾರು. ಆದರೆ ಅವರ ಆತ್ಯಂತಿಕ ಪ್ರಯತ್ನವಿರುವುದು ಈ ಜಗತ್ತೆಂಬ ಗ್ರಾಮವನ್ನು ಒಂದು ಶಿಕ್ಷಣಪರಿಸರದ ಗರ್ಭಕೋಶವಾಗಿ ಪರಿವರ್ತಿಸುವ ಕಡೆಗೆ. ಅಂಥ ಒಂದು ಗರ್ಭಕೋಶದೊಳಗೆ ಪ್ರತಿಯೊಬ್ಬ ಜೀವಿಗೂ ಪೂರಕವಾಗುವ ಸಂಕೀರ್ಣ ಭ್ರೂಣಪೋಷಕ ವ್ಯವಸ್ಥೆಯನ್ನು ಈ ಶಿಕ್ಷಣಚಿಕಿತ್ಸಕರು ತಾವು ನಿಯಂತ್ರಿಸಬೇಕೆಂದು ಬಯಸಿದ್ದಾರೆ; ಮುಕ್ತ ಮಾರುಕಟ್ಟೆಯ ತೋರಿಕೆಯುಳ್ಳ ಮಾದರಿಯೊಂದನ್ನು ಅಲ್ಲಿಗೂ ಅನ್ವಯಿಸಬೇಕೆಂಬುದು ಅವರ ಉಪಾಯವಾಗಿದೆ. ಈ ಯೋಚನಾಕ್ರಮದ ಪ್ರಕಾರ, ಈಚೆಗೆ ಅಂತರ್ರಾಷ್ಟ್ರೀಯ ಸಂಘಟನೆಗಳ ಮೂಲಕ ರೂಪಿತವಾಗುತ್ತಿರುವ ಬೌದ್ಧಿಕ ಹಕ್ಕುಗಳನ್ನು ಸರಿಯಾಗಿ ನಿಯಂತ್ರಿಸಿಕೊಂಡರೆ, ಆಗ ಜ್ಞಾನವನ್ನು ಉತ್ಪಾದಿಸಿ ಹಂಚುತ್ತಿರುವ ಕಾರ್ಪೋರೇಷನ್‌ಗಳ ಚಟುವಟಿಕೆಯನ್ನು ನಮಗೆ ಬೇಕಾದಂತೆ ನಿಯಂತ್ರಿಸಿಕೊಳ್ಳಲು ಸಾಧ್ಯ. ಈ ಮಾರ್ಗದ ಅನುಯಾಯಿಗಳ ಪ್ರಕಾರ, ಶಿಕ್ಷಣ ಎಂದರೆ ಈ ಕೆಲಸವೇ ಸರಿ.

ಶಿಕ್ಷಣವ್ಯವಸ್ಥೆಯ ಕಥನವು ಬಂಡವಾಳದ ಬೆಳವಣಿಗೆಯ ಕಥನಕ್ಕೆ ಹೋಲುವಂಥದು. ಒಮ್ಮೆ ಪ್ರಭುತ್ವದ ಹತೋಟಿಗೆ ಒಳಪಟ್ಟದ್ದೇ ಬಂಡವಾಳವು ಹೇಗೆ ಒತ್ತಾಯದಿಂದ ಸಂಗ್ರಹಿಸಲ್ಪಟ್ಟಿತೋ ಹಾಗೆಯೇ, ಶಿಕ್ಷಣವನ್ನೂ ಪ್ರಭುತ್ರವು ತನ್ನ ಹತೋಟಿಗೆ ತೆಗೆದುಕೊಂಡಿತು. ಬಂಡವಾಳದ ರಕ್ಷಣೆಗೆ ಆರಕ್ಷಕ ಮತ್ತು ಸೇನಾ ವ್ಯವಸ್ಥೆಗಳು ಹೇಗೆ ಕೈಜೋಡಿಸಿದವೋ ಹಾಗೇ, ಶಿಕ್ಷಣದ ಮೂಲಕ ಸಮಾಜವನ್ನು ನಿಯಂತ್ರಿಸಲಿಕ್ಕೂ ಇವತ್ತು ಆರಕ್ಷಕ-ಸೇನಾ ವ್ಯವಸ್ಥೆಗಳು ಸಹಾಯ ಮಾಡುತ್ತಿವೆ. ಈ ಪ್ರಕ್ರಿಯೆಯಲ್ಲಿ, ಬಂಡವಾಳಕ್ಕಿಂತ ಭಿನ್ನವಾಗಿ, ಶಿಕ್ಷಣವಾದರೋ ಅದೊಂದು ವೈಯಕ್ತಿಕ ಮತ್ತು ಸಾಮುದಾಯಿಕ ಅಗತ್ಯ ಎಂಬ ನಂಬಿಕೆಯು ರೂಢಿಗತವಾಗಿದೆ. ಕ್ರಮೇಣ, ಇನ್ನುಳಿದ ಹಲವು ಅಗತ್ಯಗಳು ಹಕ್ಕುಗಳಾಗಿ ಮಾರ್ಪಾಡುಗೊಂಡಂತೆಯೇ ಇಂದು ಶಿಕ್ಷಣವೂ ಒಂದು ಹಕ್ಕಾಗಿ ಮಾರ್ಪಟ್ಟಿದೆ. ಶಿಕ್ಷಣವೆಂಬುದು ಇವತ್ತು ಅಧಿಕಾರಶಾಹಿಯ ಒತ್ತಾಯದಿಂದ ಹೇರಲ್ಪಡುತ್ತಿದೆ; ಸಾರ್ವತ್ರಿಕವೂ ನ್ಯಾಯಯುತವೂ ಆಗಿದೆಯೆಂದು ನಂಬಲಾದ ಒಂದು ಸಾಮಾಜಿಕ ವ್ಯಸನವೂ ಆಗಿ ಇದು ಪರಿಣಮಿಸಿದೆ. ಕಾರಣ, ಶಿಕ್ಷಣವು ಪ್ರತಿಯೊಬ್ಬರನ್ನೂ ಜ್ಞಾನದ ಗ್ರಾಹಕರಾಗುವಂತೆ ಆಕರ್ಷಿಸುತ್ತದೆ; ಮತ್ತು ಅಂಥ ಜ್ಞಾನದ ಬಳಕೆಯ ಮೂಲಕವೇ ಪ್ರತಿಯೊಬ್ಬರೂ ಸ್ವಸಮ್ಮತಿಯಿಂದಲೇ ಜಗತ್ತಿನ ಹಿರಿಯಣ್ಣಂದಿರಿಗೆ ಅಡಿಯಾಳಾಗಿ ಬದುಕಲು ಕಲಿಯುವಂತೆ ಮಾಡುತ್ತದೆ.

'ಶಿಕ್ಷಕರಿಗೆ ಶಿಕ್ಷಣ ನೀಡುವವರು ಯಾರು?' – ಎಂಬ ಕಾರ್ಲ್‌ಮಾರ್ಕ್ಸ್‌ನ ಪ್ರಖ್ಯಾತ ಪ್ರಶ್ನೆಯು ಇವತ್ತಿಗೂ ಪ್ರಸ್ತುತವಾದದ್ದೇ. ಟಾಲ್‌ಸ್ಟಾಯ್‌ನ ಪ್ರಕಾರ, ಶಿಕ್ಷಣ ಎಂಬುದು ಯಾವುದಾದರೂ ಒಬ್ಬರನ್ನು ಏನಾದರೂ ಒಂದಾಗಿ ರೂಪಾಂತರಿಸುವ ಪ್ರಜ್ಞಾಪೂರ್ವಕವಾದ ಒಂದು ಕೆಲಸ. ಈಗ ಏನಾಗಿದೆಯೆಂದರೆ, ಈ 'ಏನಾದರೂ ಒಂದಾಗಿ' ರೂಪಾಂತರಿಸುವುದು ಎಂಬುದು 'ಒಂದು ನಿರ್ದಿಷ್ಟ ವ್ಯವಸ್ಥೆಯ ಅಧೀನಾಂಗವಾಗಿ' ರೂಪಿಸುವ ಕಸುಬಾಗಿದೆ; ಅರ್ಥಾತ್, ಅದು ಶೋಷಕ ವ್ಯವಸ್ಥೆಗೆ ಜನರನ್ನು ಸನ್ನದ್ಧಗೊಳಿಸುವ ಸಾಧನವಾಗಿದೆ ಮಾತ್ರವಲ್ಲ, ಇವತ್ತು ಶಿಕ್ಷಣವೆಂಬುದು ಶೋಷಕ ವ್ಯವಸ್ಥೆಗಳ ಸಂತಾನೋತ್ಪತ್ತಿಯ ಸಾಧನವೂ ಆಗಿದೆ. ಇವತ್ತಿನ ಬಹುತೇಕ ಆಧುನಿಕ ತಂತ್ರಜ್ಞಾನಗಳು– ಅದರಲ್ಲೂ ಮುಖ್ಯವಾಗಿ ಟಿವಿ ಮತ್ತು ಅಂತರ್ಜಾಲಕ್ಕೆ

ಸಂಬಂಧಿಸಿದ ತಂತ್ರಜ್ಞಾನಗಳು- ಇಂಥ ಶೋಷಕ ವ್ಯವಸ್ಥೆಗಳನ್ನು ಹಿಂದೆಂದಿಗಿಂತ ಹೆಚ್ಚು ಸಮರ್ಥವಾಗಿ ಮುನ್ನಡೆಸಲು ಸಹಾಯಕವಾಗಿವೆ.

ಇನ್ನೂ ಒಂದು ಸಂಗತಿಯನ್ನು ಮಾರ್ಕ್ಸ್ ಗುರುತಿಸಿದ್ದ- ಇನ್ನೂ ಇನ್ನೂ ಹೆಚ್ಚು ಉಪಯುಕ್ತ ವಸ್ತುಗಳನ್ನು ಉತ್ಪಾದಿಸಬೇಕೆಂಬ ಕುರುಡು ಓಟವು ಅಂತಿಮವಾಗಿ ಅನುಪಯುಕ್ತ ಮನುಷ್ಯರನ್ನಷ್ಟೇ ಸೃಷ್ಟಿಸುವಲ್ಲಿ ಪರ್ಯಾವಸಾನಗೊಳ್ಳುತ್ತದೆ. ಜಾಗತಿಕ ವ್ಯಾಪ್ತಿಯಲ್ಲಿ ಇಂದು ಸಂಭವಿಸುತ್ತಿರುವ ವಿದ್ಯಮಾನಗಳೆಲ್ಲವೂ ಇದೇ ಪ್ರಕ್ರಿಯೆಯ ಕಡೆಗೆ ಮುಖಮಾಡಿ ಹೊರಟಿವೆ. ಬಂಡವಾಳದ ದಾಹವು ಪ್ರಾಯಶಃ, ಹಿಂದೆಂದಿಗಿಂತ ಹೆಚ್ಚು ಇಂದು ಉಲ್ಬಣಗೊಂಡಿದೆ; ಆದರೆ, ಎಲ್ಲರನ್ನೂ ಜೀರ್ಣಿಸಿಕೊಳ್ಳುವಷ್ಟು ಹಿರಿದಾದ ಹೊಟ್ಟೆ ಅದಕ್ಕಿನ್ನೂ ದಕ್ಕಿಲ್ಲ. ಹೆಚ್ಚೂ ಕಡಿಮೆ ಎಲ್ಲರಿಗೂ ಉದ್ಯೋಗ ಕೊಡುವ ಸಾಮರ್ಥ್ಯ ಅದಕ್ಕಿಲ್ಲವಾದ್ದರಿಂದ, ಅಂಥವರನ್ನು ಅದು ಜಾಗತಿಕ ಮಾರುಕಟ್ಟೆಯ ವ್ಯಾಪ್ತಿಯಿಂದಲೇ ಹೊರನೂಕಬೇಕಾಗಿದೆ. ಆದ್ದರಿಂದ ಹೆಚ್ಚು ಹೆಚ್ಚು ಸಂಖ್ಯೆಯ ಜನಸಮೂಹವು ಇವತ್ತು, ಬಿಸಾಕಬಲ್ಲ ತ್ಯಾಜ್ಯವಸ್ತುಗಳಾಗಿದ್ದಾರೆ; ಅಂಥ ಜನಸಮೂಹಗಳನ್ನು ಉಪಯೋಗಿಸಿಕೊಳ್ಳುವ ಮಾರ್ಗವು ಬಂಡವಾಳಕ್ಕೆ ಇನ್ನೂ ಲಭ್ಯವಾಗಿಲ್ಲ. ಆದ್ದರಿಂದ, ಸಾರ್ವಜನಿಕ ಹಣವನ್ನೇ ಬಳಸಿಕೊಂಡು, ಆ ಬಹುಸಂಖ್ಯಾತರಿಗೆ ಜ್ಞಾನದ ಪೊಟ್ಟಣಗಳನ್ನು ಹಂಚುವುದು ಬಂಡವಾಳಕ್ಕೆ ಇವತ್ತು ಅಗತ್ಯವಾದೊಂದು ತಂತ್ರವಾಗಿದೆ. ಅಂದರೆ, ಅಂಥ ಜನರನ್ನು ಬಳಕೆದಾರರಾಗಿ ಪರಿವರ್ತಿತಗೊಳಿಸಲು ಅನುಕೂಲವಾಗುವ ಶಿಕ್ಷಣವನ್ನು ಇಂದು ಬಂಡವಾಳವು ಕೊಡಬೇಕಾಗಿದೆ; ಮತ್ತು, ಹಾಗೆ ಬಳಕೆದಾರರಾಗಿ ಪರಿವರ್ತಿಸುವ ಮೂಲಕ ಆ ಜನರನ್ನೂ ಮತ್ತೊಮ್ಮೆ ಶೋಷಣೆಯ ತೆಕ್ಕೆಗೆ ತಂದುಕೊಳ್ಳುವುದು ಬಂಡವಾಳಕ್ಕೀಗ ಅನಿವಾರ್ಯವಾದೊಂದು ಮಾರ್ಗಸೂಚಿಯಾಗಿದೆ.

ಆದರೆ ಅಂಥ 'ತ್ಯಾಜ್ಯ' ಜನರೀಗ ಜಗತ್ತಿನ ಎಲ್ಲೆಡೆ ಪ್ರತಿರೋಧ ವ್ಯಕ್ತಪಡಿಸಲು ಪ್ರಾರಂಭಿಸಿದ್ದಾರೆ. ಬಂಡವಾಳದ ತರ್ಕದಿಂದ ಹೊರಬರಲು ಅವರು ಹಲವು ರೀತಿಯ ಪ್ರಯತ್ನಗಳನ್ನಿಗ ನಡೆಸತೊಡಗಿದ್ದಾರೆ- ಬಂಡವಾಳವು ತಮ್ಮ ಮೇಲೆ ಹಾಕಿರುವ ಬಹಿಷ್ಕಾರವನ್ನು ಅವರು ನಾಟಕೀಯವಾಗಿ ತಿರುವುಮುರುವುಗೊಳಿಸಿ ಅದನ್ನೇ ತಮ್ಮ ಅನುಕೂಲವಾಗಿ ಪರಿವರ್ತಿಸಿಕೊಳ್ಳುತ್ತಿದ್ದಾರೆ; ತಮಗೆ ಸರಿಕಂಡ ಹಾದಿಯಲ್ಲಿ ನಡೆಯುವ ಮತ್ತು ತಮ್ಮ ಬದುಕನ್ನು ತಾವೇ ರೂಪಿಸಿಕೊಳ್ಳುವ ಸ್ವಾತಂತ್ರ್ಯವನ್ನು ಅವರೀಗ ಹುಡುಕತೊಡಗಿದ್ದಾರೆ. ಅಂಥ ಹುಡುಕಾಟದ ಮೊದಲ ಹೆಜ್ಜೆಯೇ ಶಿಕ್ಷಣದಿಂದ ತಪ್ಪಿಸಿಕೊಳ್ಳುವುದು.

೧೯೪೯ರಲ್ಲಿ ಅಮೇರಿಕಾದ ಅಧ್ಯಕ್ಷ ಹ್ಯಾರಿ ಟ್ರುಮನ್ ಅವರು ಅಭಿವೃದ್ಧಿಗೆ ಪ್ರೋತ್ಸಾಹ ಕೊಡುವ ಹೊಸ ನೀತಿಯನ್ನು ಜಾರಿಗೆ ತಂದು ಅದರ ಅಂಗವಾಗಿ ಶಿಕ್ಷಣಕ್ಕೆ ಉತ್ತೇಜನ ನೀಡಲು ಆರಂಭ ಮಾಡಿದರು. ಆ ಕಾರ್ಯಯೋಜನೆಯ ಸಂದರ್ಭದಲ್ಲಿ, ೧೯೫೮ರಲ್ಲಿ, ಯುನೆಸ್ಕೋದ ತಜ್ಞರು ಲ್ಯಾಟಿನ್ ಅಮೇರಿಕಾದ ಪರಿಸ್ಥಿತಿಯನ್ನು ಅವಲೋಕಿಸುತ್ತ ಹೀಗೆ ಹೇಳೀದ್ದರು- ಅಲ್ಲಿಯ ಮಕ್ಕಳ ಶಿಕ್ಷಣವನ್ನು ಅಭಿವೃದ್ಧಿಪಡಿಸಲಿಕ್ಕೆ ಎದುರಾಗುವ ಮೊದಲ ತೊಡಕೆಂದರೆ ಅಲ್ಲಿಯ ಪೋಷಕವರ್ಗದ ನಿರಾಸಕ್ತಿ ಮತ್ತು ವಿರೋಧಗಳೇ. ಹನ್ನೊಂದು ವರ್ಷಗಳ ಬಳಿಕ ಅದೇ ತಜ್ಞರು ಆಡಿದ

ಮಾತು ಅದಕ್ಕೆ ವಿರುದ್ಧವಾಗಿತ್ತು- ಲ್ಯಾಟಿನ್ ಅಮೇರಿಕಾದ ಯಾವ ದೇಶದಲ್ಲಿಯೂ ಶಿಕ್ಷಣಕ್ಕಿರುವ ಬೇಡಿಕೆಯನ್ನು ಪೂರೈಸಲು ಅಸಾಧ್ಯ. ಅಷ್ಟು ಬೇಡಿಕೆ ಅಲ್ಲಿದೆ ಎಂದು ಆಗ ಅವರು ಎಚ್ಚರಿಸಿದರು. ಅರ್ಥಾತ್, ಆ ಕಾರ್ಯಯೋಜನೆ ಯಶಸ್ವಿಯಾಗಿತ್ತು. ಶಿಕ್ಷಣ ಎಂಬ ಪರಿಕಲ್ಪನೆಯ ಬಗ್ಗೆಯೇ ಶಿಕ್ಷಣವನ್ನು ಪಡೆದ ಅಲ್ಲಿಯ ಪೋಷಕರು ಸಹಜವಾಗಿಯೇ ಇನ್ನೂ ಹೆಚ್ಚು ಶಾಲೆಗಳೂ ಶಿಕ್ಷಕರೂ ಬೇಕೆಂದು ಬೇಡತೊಡಗಿದ್ದರು; ಎಷ್ಟು ಪೂರೈಸಿದರೂ ಬಹುಸಂಖ್ಯಾತರ ಅಗತ್ಯಗಳನ್ನು ಪೂರೈಸಲಾಗದಷ್ಟು ಬೇಡಿಕೆ ಆಗ ಅಲ್ಲಿ ನಿರ್ಮಾಣವಾಗಿತ್ತು. ಇಂಥದೇ ಪ್ರಕ್ರಿಯೆಯನ್ನು ಜಗತ್ತಿನ ಬೇರೆಬೇರೆ ಭಾಗಗಳಲ್ಲಿ ಬೇರೆಬೇರೆ ಸಮಯಗಳಲ್ಲಿ ನಡೆಸುವ ಮೂಲಕವೇ ಶಿಕ್ಷಣದ ಸ್ವಾಮ್ಯ ನೆಲೆಯೂರಿದೆ.

ಆದರೆ ಕಳೆದ ಇಪ್ಪತ್ತು ವರ್ಷಗಳೀಚೆಗೆ ಸ್ಥಿತಿ ಬದಲಾಗತೊಡಗಿದೆ. ಶಿಕ್ಷಣಕ್ಕೆ ವಿರೋಧಿಸುವ ಮತ್ತು ಶಿಕ್ಷಣಾವಕಾಶಗಳಿಗಾಗಿ ಹಕ್ಕೊತ್ತಾಯ ಮಂಡಿಸುವ ಹಂತಗಳೀಗ ಮುಗಿದು, ಶಿಕ್ಷಣದಿಂದ ಬಿಡುಗಡೆ ಪಡೆಯಬಯಸುವ ಹೋರಾಟ ಆರಂಭವಾಗತೊಡಗಿದೆ. ಶಿಕ್ಷಣದಿಂದ ಉದ್ಯೋಗವೂ ಗೌರವವೂ ಮತ್ತು ಸಾಮಾಜಿಕ ಚಲನಶೀಲತೆಯೂ ಲಭ್ಯವಾಗುತ್ತದೆ ಎಂಬ ಭ್ರಮೆಯಿಂದಲೇ ಇದುವರೆಗೂ ಬಹುಸಂಖ್ಯೆಯ ಜನರು ಅದಕ್ಕೆ ದುಬಾರಿ ಬೆಲೆಯನ್ನು ತೆರಲು ಸಮ್ಮತಿಸುತ್ತಾರೆ, ಅದರಿಂದ ಸಾಂಸ್ಕೃತಿಕ ವಿಚ್ಛಿದ್ರತೆ, ಕುಟುಂಬ ವ್ಯವಸ್ಥೆಯ ಒಡಕು ಮತ್ತು ಸಾಮುದಾಯಿಕ ಬದುಕಿನ ವಿನಾಶ ಇವೆಲ್ಲ ನಡೆದರೂ ಅದನ್ನವರು ಸಹಿಸಿಕೊಳ್ಳುತ್ತಾರೆ. ಆದರೆ ಕ್ರಮಕ್ರಮೇಣ ಜನಸಂಖ್ಯೆಯ ಬಹುಭಾಗಕ್ಕೆ ಅರ್ಥವಾಗತೊಡಗಿದ ಸತ್ಯ ಏನೆಂದರೆ- ಯಾರೊಬ್ಬರಿಗೂ ಪದವಿಪ್ರಮಾಣಪತ್ರ ದೊರಕಿದ ಮಾತ್ರಕ್ಕೆ ಅದು, ಆಯಾ ಕ್ಷೇತ್ರದಲ್ಲಿ ಕಸುಬು ಕಲಿತದ್ದಕ್ಕಾಗಲೀ ಅಥವಾ ತಜ್ಞತೆ ಗಳಿಸಿದ್ದಕ್ಕಾಗಲೀ ಪ್ರಮಾಣವಾಗಲಾರದು; ಬದಲು, ಇಂಥ ತರಗತಿಯಲ್ಲಿ ಈತ ಇಷ್ಟು ದಿನ ಕುರ್ಚಿಯ ಮೇಲೆ ಕೂತಿದ್ದ ಎಂಬುದನ್ನು ಮಾತ್ರವೆ ಆ ಪ್ರಮಾಣಪತ್ರವು ದೃಢೀಕರಿಸುತ್ತದೆ, ಅಷ್ಟೇ. ಉದ್ಯೋಗ ಭರವಸೆ ಕೊಡುವುದು ಹಾಗಿರಲಿ, ಅದಕ್ಕೆ ವಿರುದ್ಧವಾಗಿ ಈ ಪದವಿಗಳು ಬಹುತೇಕರಿಗೆ ಖಾಯಂ ನೈರಾಶ್ಯಕ್ಕೆ ದಾರಿ ಮಾಡಿಕೊಡುತ್ತವೆ. ಟ್ಯಾಕ್ಸಿ ಚಾಲಕರಾಗಿ ಅಥವಾ ಹೋಟೆಲು ಕೆಲಸಗಾರರಾಗಿ ದುಡಿಯಬೇಕಾಗಿ ಬರುವ ಎಂಜಿನಿಯರುಗಳು ಮತ್ತು ಲಾಯರುಗಳು ಅನುಭವಿಸುವ ಅವಮಾನವೇ ಅದಕ್ಕೆ ಸಾಕ್ಷಿ. ಆದರೆ, ಇನ್ನೊಂದು ದಿಕ್ಕಿನಿಂದ, ಶಿಕ್ಷಿತರ ಇಂಥ ಅವಮಾನವೇ ಅಂಥ ಪದವಿಗಳಿಲ್ಲದವರಿಗೆ ಒಂದು ಬಿಡುಗಡೆಯ ಅನುಕೂಲವಾಗಿ ಕಾಣಿಸುವುದೂ ಇದೆ; ಯಾಕೆಂದರೆ, ಅಂಥ ಸ್ಥಿತಿಯಲ್ಲಿಯೇ ಅವರು ತಮ್ಮಲ್ಲಿರುವ ಬುದ್ಧಿ, ಕೌಶಲ ಮತ್ತು ಕಸುಬುಗಾರಿಕೆಯನ್ನು ಅರಿತು ತಮ್ಮನ್ನೇ ಪುನರ್‌ಮೌಲ್ಯೀಕರಿಸಿಕೊಳ್ಳುತ್ತಾರೆ.

ಮೂವತ್ತು ವರ್ಷಗಳ ಹಿಂದೆಯೇ ಇವಾನ್ ಇಲ್ಲಿಚ್ ಭವಿಷ್ಯ ಹೇಳಿದ್ದಂತೆ, ಇಂದು ಶಾಲೆಗಳ ವಿನಾಶವನ್ನು ಅಂತರ್ಜಾಲದ ತಂತ್ರಗಳು ತ್ವರಿತಗೊಳಿಸುತ್ತಿವೆ. ಈ ನಡುವೆ ಬಹುಸಂಖ್ಯಾತ ಜನವರ್ಗವು ಅಧಿಕಾರಶಾಹಿಯ ಶಾಸನ ಮತ್ತು ಶ್ರೀಮಂತರ ಮೋಡಿಯಿಂದ ತಮ್ಮನ್ನು ತಪ್ಪಿಸಿಕೊಳ್ಳುವ ಪರಿಯಲ್ಲೇ ಶಿಕ್ಷಣದಿಂದಲೂ ತಮ್ಮ ಮಕ್ಕಳನ್ನು ಶಾಲೆಗೇನೋ ಕಳಿಸಬಹುದು, ಆದರೆ ಅದು ಪದವಿ ಪಡೆದುಕೊಳ್ಳಲಿಕ್ಕಾಗಿ

ಮಾತ್ರ; ಮತ್ತು ಆ ಮೂಲಕ ಆಧುನಿಕ ಸಮಾಜದಲ್ಲಿ ಚಲಾವಣೆಯಲ್ಲಿರಲು ಅಗತ್ಯವಾಗುವ ಪ್ರಮಾಣಪತ್ರವೆಂಬ ರಹದಾರಿಯನ್ನು ಗಳಿಸಿಕೊಳ್ಳಲಿಕ್ಕೆ ಮಾತ್ರ. ಶಿಕ್ಷಣವನ್ನು ಕುರಿತು ಇನ್ನಾವ ಮಹಾಭ್ರಮೆಗಳನ್ನೂ ಇಟ್ಟುಕೊಳ್ಳದಷ್ಟು ಅವರೀಗ ಸುಶಿಕ್ಷಿತರಾಗಿದ್ದಾರೆ.

ಆದ್ದರಿಂದ, ಜನರೇ ಈಗ ಶಿಕ್ಷಣಕ್ಕೆ 'ಸಾಕು' ಎನ್ನತೊಡಗಿದ್ದಾರೆ. ಜತೆಗೆ, ತಮ್ಮ ಹಳೆಯ ಕಲಿಕೆಯ ಮಾರ್ಗಗಳನ್ನೆಲ್ಲ ಅವರು ಒಂದೊಂದಾಗಿ ಮರಳಿ ನೆನಪಿಸಿಕೊಳ್ಳುತ್ತಿದ್ದಾರೆ. ಇಂಥ ಕಲಿಕೆಯ ಹುಡುಕಾಟಗಳಲ್ಲಿ ಶಿಶುಗಳೇ ತಜ್ಞರು. ಮುಂದೆ ಪಡೆಯುವ ಶಿಕ್ಷಣ ಎಂಬುದು ನಿಜವಾಗಿ, ಅಂಥ ಕಲಿಕೆಗಳೆಲ್ಲದರ ಆರ್ಥಿಕ ರೂಪಾಂತರ ಮಾತ್ರ, ಮತ್ತು ಕಲಿಕೆಯನ್ನು ರೂಪಾಂತರಗೊಳಿಸಿ ಅದನ್ನು ಜ್ಞಾನವೆಂಬ ಸರಕಿನ ಬಳಕೆಯಾಗಿ ಮಾರ್ಪಡಿಸಿದ ಹೊಸ ರೂಪವೇ ಶಿಕ್ಷಣ. ಇಂಥ ಶಿಕ್ಷಣಕ್ಕೆ ಪ್ರತಿರೋಧವಾಗಿಯೇ ಬಹುಜನರು ಈಗ ತಮ್ಮ ಕಲಿಕೆಯನ್ನು ಮರಳಿ ಆವಿಷ್ಕರಿಸಲು ಆರಂಭಿಸಿದ್ದಾರೆ– ಅವರೀಗ 'ಎಜುಕೇಷನ್' (ಶಿಕ್ಷಣ) ಎಂಬ ಪದಕ್ಕೆ ಪರ್ಯಾಯವಾಗಿ 'ಟು ಲರ್ನ್' (ಕಲಿಯುವುದು) ಎಂಬ ಕ್ರಿಯಾಪದವನ್ನು ಮುನ್ನೆಲೆಗೆ ತರುತ್ತಿದ್ದಾರೆ. ಕಾರಣ, ಶಿಕ್ಷಣ ಎಂಬ ನಾಮರೂಪವು ಮೂಲಭೂತವಾಗಿ ಒಂದು ಅವಲಂಬಿತ ಸ್ಥಿತಿ; ಇದರೊಳಗೆ ಇರುವ ಪ್ರತಿಯೊಬ್ಬನೂ ಸರ್ಕಾರಿ ಅಥವಾ ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ಅವಲಂಬಿಸುವುದು ಅನಿವಾರ್ಯ. ಆದರೆ, ಕಲಿಯುವುದು ಎಂಬ ಕ್ರಿಯಾರೂಪವು ತಮ್ಮೊಳಗೆಯೇ ಇರುವ ಸಾಮರ್ಥ್ಯವೊಂದರ ಆವಿಷ್ಕಾರ; ಅದು ಪರರೊಂದಿಗೂ ನಿಸರ್ಗದೊಂದಿಗೂ ಇಟ್ಟುಕೊಂಡು ಮುನ್ನಡೆಯುವ ಕ್ರಿಯಾಶೀಲ ಸಂಬಂದ. ಅಂದರೆ, ಕಲಿಯುವುದೆಂಬ ಪ್ರಕ್ರಿಯೆಯು ವೈಯಕ್ತಿಕವಾದ ಒಂದು ಕೆಲಸ; ಮತ್ತು ಹಾಗೆ ಕಲಿಯುವುದಕ್ಕೂ ಮತ್ತು ಆ ಮೂಲಕ ಬದುಕುವ ಕ್ಷಮತೆಯನ್ನು ವರ್ಧಿಸಿಕೊಳ್ಳಲಿಕ್ಕೂ ಇರುವ ಮಾರ್ಗ ಒಂದೇ–ಅದು, ಜಗತ್ತಿನಿಂದ ಕಲಿಯುವುದು, ಜಗತ್ತಿನ ಬಗ್ಗೆ ಕಲಿಯುವುದಲ್ಲ– ಇದು ಬಹು ಸಂಖ್ಯೆಯ ಜನರಿಗೀಗ ಅರಿವಾಗಹತ್ತಿದೆ.

ತತ್ಫಲವಾಗಿ, ಜಗತ್ತಿನ ಎಲ್ಲ ಕಡೆಗಳಲ್ಲೂ ಈಗ ಭಿನ್ನಮತೀಯ ಸಂಘಟನೆಗಳು ಮತ್ತು ಪ್ರತಿರೋಧದ ಮೂಲಕವೇ ಅನುಕೂಲವನ್ನೂ ಸ್ವಾತಂತ್ರ್ಯದ ಹೊಸ ಅವಕಾಶಗಳನ್ನು ಪಡೆದುಕೊಳ್ಳಲು ಹವಣಿಸುತ್ತಿವೆ. ಅಲ್ಲಲ್ಲಿ ಕೆಲವು ಸಮುದಾಯಗಳು ಶಾಲೆಗಳನ್ನು ಮುಚ್ಚಿಸಿ ಅವನ್ನು ಸಮುದಾಯದ ನಿಯಂತ್ರಣಕ್ಕೆ ಒಳಪಡಿಸಿಕೊಂಡಿವೆ. ಉದಾಹರಣೆಗೆ, ಮೆಕ್ಸಿಕೋದ ದಕ್ಷಿಣ ಭಾಗದ ಚಿಯಾಪಾಸ್ ಮತ್ತು ಓಕ್ಸಕಾಗಳಲ್ಲಿ, ಹಲವು ಸಮುದಾಯಗಳು ಶಾಲೆಯನ್ನು ಮುಚ್ಚಿಸಿವೆ; ತಮ್ಮ ಮಕ್ಕಳ ವಿದ್ಯಾಭ್ಯಾಸವು ತಮ್ಮ ಹತೋಟಿಯಲ್ಲೇ ಉಳಿಯಬೇಕೆಂದು ಆ ಸಮುದಾಯಗಳು ಒತ್ತಾಯಿಸುತ್ತಿವೆ. ಚಿಯಾಪಾಸ್ ಪ್ರಾಂತ್ಯದೊಳಗೆ ಜಪಟಿಸ್ಟಾ ಬಂಡಾಯಗಾರರು ಹತೋಟಿ ಪಡೆದಿರುವ ಸ್ಥಳಗಳಲ್ಲಿ, ನೂರಾರು ಹೊಸ 'ಶಾಲೆ'ಗಳನ್ನು ತೆರೆಯಲಾಗಿದೆ; ಸಮುದಾಯವೇ ಆರಂಭಿಸಿ ನಡೆಸುತ್ತಿರುವ ಆ ಶಾಲೆಗಳ ನಿರ್ವಹಣೆ ಮತ್ತು ನಿಯಂತ್ರಣದಲ್ಲಿ ಸರ್ಕಾರ ಅಥವಾ ವೃತ್ತಿಶೀಲ ಅಧ್ಯಾಪಕರಿಗೆ ಅವಕಾಶವಿಲ್ಲ. ಮಾತ್ರವಲ್ಲ, ಶಾಲೆಗಳ ಮೇಲೆ ಸಾರ್ವಜನಿಕ ಹಣವನ್ನು ಹೂಡುವುದಕ್ಕೆ ವಿರುದ್ಧವಾಗಿ, ಆಲ್ಕೋಹಾಲು ಮತ್ತು

ತಂಬಾಕಿನ ಮೇಲೆ ತೆರಿಗೆ ಹಾಕುವಂತೆ ಶಾಲೆಗಳ ಮೇಲೂ ತೆರಿಗೆ ಹಾಕಬೇಕೆಂದು ಅಲ್ಲಿಯ ಸಮುದಾಯಗಳು ಒತ್ತಾಯಿಸತೊಡಗಿವೆ. ಇನ್ನೂ ಕೆಲವು ಚಳುವಳಿಗಳು, ಶಿಕ್ಷಣವು ಕಡ್ಡಾಯವೆಂದು ಸಾರಿರುವ ಎಲ್ಲ ಕಾನೂನುಗಳನ್ನು ರದ್ದುಪಡಿಸಬೇಕೆಂದು ಹೋರಾಟಕ್ಕಿಳಿದಿವೆ. ಆದರೆ ಇಂಥ ಪರ್ಯಾಯ ಚಳುವಳಿಗಳೆಲ್ಲದರ ಮುಖ್ಯ ಗುರಿ ಇನ್ನೊಂದೇ ದಿಕ್ಕಿನ ಕಡೆಗೆ ತಿರುಗಿಕೊಂಡಿದೆ- ಶಿಕ್ಷಿತವರ್ಗವು ಇನ್ನೂ ಹೆಚ್ಚು ಹೆಚ್ಚು ಜ್ಞಾನವನ್ನು ಬಳಸುತ್ತ ಪೈಪೋಟಿಯ ಒಂದು ಮೇಲಾಟದಲ್ಲಿ ತೊಡಗಿಕೊಂಡಿರುವ ಈ ಸಂದರ್ಭದಲ್ಲಿ, ಅಶಿಕ್ಷತರು ಮತ್ತು ಅಲ್ಪ ಶಿಕ್ಷಿತರು ಕಲಿಕೆಯೆಂಬುದು ವೈಯಕ್ತಿಕ ಸಂಬಂಧಗಳನ್ನು ವಿಸ್ತರಿಸಿಕೊಳ್ಳುವ ಒಂದು ಕ್ರಿಯೆಯೆಂಬುದನ್ನು ಹಾಗೂ ಕಲಿಕೆಯ ನಿಯಂತ್ರಣವು ಕಲಿಯುವವನ ಬಳಿಯೇ ಇರಬೇಕೆಂದೂ ಪ್ರಯತ್ನ ನಡೆಸುತ್ತಿದ್ದಾರೆ. 'ಶಿಕ್ಷಣ' ಕುರಿತಂತೆ ಸದ್ಯ ನಡೆಯುತ್ತಿರುವ ಪ್ರಚಾರಕ್ಕೆ ಆ ಭಿನ್ನ ಮತೀಯರ ಧೋರಣೆ ವಿಶಿಷ್ಟವಾಗಿದೆ- ಶಿಕ್ಷಣವೆಂಬುದು ಬೀದಿಬದಿ ಮಾರಾಟಕ್ಕೆ ಸಿಗುವ ಹಾಳುಮೂಳು ತಿಂಡಿಗಳ ಹಾಗೆಂದೂ, ಅದು ಪೋಷಕವಲ್ಲದ್ದಿದ್ದರೂ ಹಲವೊಮ್ಮೆ ಹೊಟ್ಟೆತುಂಬಿಕೊಳ್ಳಲಿಕ್ಕೆ ಅನಿವಾರ್ಯವಾಗಿರುವಷ್ಟರ ಮಟ್ಟಿಗೆ ಮಾತ್ರ ಅದನ್ನು ಬಳಸಿಕೊಳ್ಳಬೇಕೆಂದೂ ಅವರ ಧೋರಣೆಯ ತಿರುಳು. ಅರ್ಥಾತ್ ಶಿಕ್ಷಣವೆಂಬುದು ಮಾರಾಟಕ್ಕಿರುವ ಜ್ಞಾನ; ಅದರಿಂದ ತಿಳುವಳಿಕೆ ಸಿಗಲಾರದು- ಎಂಬುದು ಈ ವಿರೋಧಿ ನಿಲುವಿನ ಸಾರಾಂಶ.

ಒಂದು ಕಡೆಗೆ ಇಂದು, ಬಿಲ್‌ಗೇಟ್ಸ್ ಮತ್ತು ಅವರ ಸಹೋದ್ಯೋಗಿಗಳು, ಶಿಕ್ಷಣಕ್ಕೆ ಬೆಂಬಲ ನೀಡುತ್ತಾ ಆಧುನಿಕ ಶಿಕ್ಷಣ ಪದ್ಧತಿಯ ಮರಣಕಾಲವನ್ನು ಮುಂದೂಡುತ್ತಿದ್ದರೆ, ಇನ್ನೊಂದು ಕಡೆಗೆ, ಕೆಲವು ಜನ ಅದರ ಸಾವಿಗೆ ಕಾಯುತ್ತಾ, ಸೃಜನಶೀಲ ಪ್ರಯೋಗಗಳ ಮೂಲಕವೂ ಸಾಮೂಹಿಕ ಸಹಭಾಗಿತ್ವದ ಮೂಲಕವೂ ಹೊಸ ಕಲಿಕೆಯ ಸಾಮರ್ಥ್ಯಗಳ ಹುಡುಕಾಟದಲ್ಲಿ ತೊಡಗಿಕೊಂಡಿದ್ದಾರೆ. ಆಧುನಿಕ ಕಾಲದ ಶಿಕ್ಷಣದಲ್ಲಿ ಅಂತರ್ಗತವಾಗಿರುವ ಕೊಳ್ಳುವ ಮತ್ತು ಉಪಭೋಗಿಸುವ ಸಾಮರ್ಥ್ಯಕ್ಕಿಂತ ಭಿನ್ನವಾಗಿ, ಕಲಿಯುವ ಮತ್ತು ಕೆಲಸಮಾಡುವ ಸಾಮರ್ಥ್ಯವೇ ಮುಖ್ಯವೆಂದು ಸೂಚಿಸುವ ಈ ಹೊಸ ನಿಲುವು, ಅಂಥ ಕಲಿಕೆ-ಕೆಲಸಗಳ ಮೂಲಕವೇ ಹೊಸ ಸಾಮೂಹಿಕ ಆಸ್ತಿಯೊಂದನ್ನು ಸೃಷ್ಟಿಸುವ ಆಶಯವನ್ನು ತನ್ನೊಳಗಿರಿಸಿಕೊಂಡಿದೆ. ಆದ್ದರಿಂದ ಇವತ್ತು ಪ್ರಭಾವಶಾಲಿಯಾಗಿರುವ ಸಾಂಸ್ಥಿಕ ರಚನೆಗಳನ್ನು ಪಲ್ಲಟಗೊಳಿಸುವ ಮೂಲಕವೇ ಅವುಗಳ ಪುನರ್‌ಸ್ಥಾಪನೆಯೂ ಸಾಧ್ಯವೆಂದು ಈ ಹೊಸ ನಿಲುವು ನಂಬುತ್ತದೆ. ಉದಾಹರಣೆಗೆ, ಇವತ್ತು ಶಿಕ್ಷಣವೆಂದು ಕರೆಯಲಾಗುತ್ತಿರುವ ಯಾಂತ್ರಿಕ ವಿಧಿವಿಧಾನಗಳು ಉದ್ಯಾಪನೆಗೊಂಡಾಗ ಮಾತ್ರವೇ, ಹೊಸ ಯುಗವೊಂದರ ಆವಾಹನೆ ಆರಂಭಗೊಳ್ಳಲಿಕ್ಕೆ ಸಾಧ್ಯವಿದೆ; ಅಂಥ ಹೊಸ ಕಲಿಕೆಯ ಯುಗದ ಆರಂಭದ ಸೂಚನೆಗಳು ಈಗಾಗಲೇ ಕಾಣಲಿಕ್ಕೂ ಆರಂಭವಾಗಿವೆ.

(ಸಾಭಾರ : ಹೊಸ ಶತಮಾನಕ್ಕೆ ಹೊಸ ಪರಿಭಾಷೆಗಳು : ವಿನಯ ಲಾಲ್ ಮತ್ತು ಅಶೀಶ್ ನಂದಿ ಸಂಪಾದಿಸಿರುವ ಪರಿಭಾಷಾಕೋಶ)

* * *

ಆರೋಗ್ಯದ ಗುಟ್ಟು ಪ್ರಕೃತಿಯಲ್ಲಿ, ಪಾಪದ ಮೂಲ ಸಂಗ್ರಹದಲ್ಲಿ

– ವಿನೋಬಾ

ಪ್ರಿವೆನ್ಷನ್ ಈಸ್ ಬೆಟರ್ ದ್ಯಾನ್ ಕ್ಯೂರ್.

ರೋಗವು ಹುಟ್ಟದೆ ಇರುವ ಹಾಗೆಯೇ ಮೊದಲು ನೋಡಿಕೊಳ್ಳಬೇಕು. ಪ್ರಿವಿನ್ಷನ್‌ಗೆ ಇಷ್ಕೃತಿ ಎನ್ನುತ್ತಾರೆ ಮತ್ತು ಕ್ಯೂರ್‌ಗೆ ನಿಷ್ಕೃತಿ ಎನ್ನುತ್ತಾರೆ. ವನಸ್ಪತಿಗಳನ್ನು ಕುರಿತು ಹೀಗೆ ಪ್ರಾರ್ಥನೆ ಮಾಡಲಾಗಿದೆ.

ಇಷ್ಕೃತಿರ್ ನಾಮ ವೊ ಮಾತಾ ಅಥೊ ಯುಯಂ ಸ್ಥ ನಿಷ್ಕೃತೀಃ

ಹೇ ವನಸ್ಪತಿಗಳೇ! ನಿಮ್ಮ ತಾಯಿ ಇಷ್ಕೃತಿ, ನೀನು ನಿಷ್ಕೃತಿ. ರೋಗ ಬಂದ ಮೇಲೆ ನೀನು ಸಹಾಯ ಮಾಡುತ್ತೀಯೆ. ಆದರೆ ರೋಗ ಬರಲೇಕೂಡದು ಎಂಬುದಾಗಿ ನಿನ್ನ ತಾಯಿ ಹೇಳುತ್ತಾಳೆ. ವನಸ್ಪತಿಗಳ ಮಾತೆ ಪ್ರಕೃತಿ.

ಮೊದಲು ಇಷ್ಕೃತಿ ಬೇಕು. ರೋಗಿಗಳಿಗೆ ಔಷಧಿಗಳಿಂದ ತುಂಬಲಾಗುತ್ತದೆ. ಹಾಗೆ ಆಗಕೂಡದು. ಮೊದಲು ರೋಗವಿರಕೂಡದು. ಶರೀರ ನಿರೋಗ ಹೇಗೆ ಇರಬೇಕೆಂಬ ಪ್ರಯತ್ನ ಮುಖ್ಯವಾಗಬೇಕು. ಇಷ್ಕೃತಿಯ ಉತ್ತಮ ಜ್ಞಾನವನ್ನು ಹಳ್ಳಿ ಹಳ್ಳಿಗಳಲ್ಲಿ ತಿಳಿಸಬೇಕು. ಗಾಳಿ ಉತ್ತಮವಾಗಿರಬೇಕು, ದೂಷಿತವಾಗಿರಕೂಡದು ಎಂಬ ಬಗ್ಗೆ ಪ್ರಯತ್ನವಿರಬೇಕು. ಆಸನ, ಪ್ರಾಣಾಯಾಮ, ಬಸ್ತಿ ಇತ್ಯಾದಿಗಳ ಜೊತೆ ದಿನಾಲೂ ಓಡಾಡುವುದನ್ನೂ ಕಲಿಸಬೇಕು. ಹಳ್ಳಿಗಳಲ್ಲಿ ಗಿಡಮೂಲಿಕೆಗಳಿರುತ್ತವೆ. ಅವುಗಳ ತಾಜಾರಸವನ್ನು ದಿನಾಲೂ ತೆಗೆದುಕೊಳ್ಳಬೇಕು. ಆಗ ರೋಗ ಹುಟ್ಟುವುದಿಲ್ಲ. ಪ್ರತಿಯೊಬ್ಬನನ್ನೂ ಪೂರ್ಣವಾಗಿ ಸ್ವಾವಲಂಬಿಯನ್ನಾಗಿ ಮಾಡಿರುವುದು ಪರಮೇಶ್ವರನ ಲೀಲೆ ಮತ್ತು ಅವನ ಯೋಜನೆ. ಇದನ್ನು ನಾವು ಮರೆಯಕೂಡದು. ಜ್ಞಾನದ ಸಾಧನವನ್ನು ಪ್ರತಿಯೊಬ್ಬನಿಗೂ ಕೊಡಲಾಗಿದೆ. ಅನ್ನ ಪಚನಾ ಶಕ್ತಿಯನ್ನು ಪ್ರಕೃತಿ ಪ್ರತಿಯೊಬ್ಬರಿಗೂ ಕೊಟ್ಟಿದೆ. ಪ್ರತಿಯೊಬ್ಬರಿಗೂ ಪರಿಪೂರ್ಣವಾದ ಶರೀರವನ್ನು ಕೊಟ್ಟಿದೆ. ಗಾಳಿ ಮತ್ತು ನೀರು ಪ್ರತಿಯೊಬ್ಬನಿಗಾಗಿ ಸಿದ್ಧವಿದೆ. ಆದ್ದರಿಂದ ಜ್ವರದ ಉಪಚಾರ ಯಾವ ರೀತಿ ಮಾಡಬೇಕು ಎಂಬ ಜ್ಞಾನವನ್ನು ಕೂಡ ಪ್ರತಿಯೊಬ್ಬನಿಗೂ ಕೊಟ್ಟಿರುವಂತಾಗಬೇಕು. ಅಲ್ಲದೆ ವನಸ್ಪತಿಗಳ ಆಧಾರವನ್ನು ಕೂಡ ಬಹಳಷ್ಟು ಪಡೆಯುವ ಅವಶ್ಯಕತೆ ಇರಕೂಡದು. ಅದು ಮಣ್ಣಿನ ಉಪಚಾರವಾಗಬಹುದು, ನೀರಿನ ಉಪಚಾರವಾಗಬಹುದು ಈ ರೀತಿಯಾಗಿ ವೇದಗಳಲ್ಲಿ ಸೃಷ್ಟಿ ದೇವತೆಯ ಉಪಾಸನೆಯನ್ನು ಅನೇಕ ಪ್ರಕಾರವಾಗಿ ತಿಳಿಸಿಲಾಗಿದೆ. ರೋಗಗಳ ಉಪಚಾರದಲ್ಲಿ ನೀರಿನ ಉಪಯೋಗ ಎಷ್ಟಿದೆ, ಸೂರ್ಯ ಕಿರಣಗಳ ಉಪಯೋಗ ಎಷ್ಟಿದೆ ಎಂಬುದೆಲ್ಲವೂ ವೇದಗಳಲ್ಲಿ ತುಂಬಿದೆ. ನಾವು ಸ್ವಲ್ಪಾದರೂ ಯೋಚಿಸಿದಲ್ಲಿ ನಮ್ಮ ಇಡೀ ಶರೀರ ಬ್ರಹ್ಮಾಂಡದಿಂದ ರಚಿತವಾಗಿದೆ ಯೆಂದು ನಮ್ಮ ಗಮನಕ್ಕೆ ಬರುವುದು. ಶರೀರದಲ್ಲಿ ಏನೆಲ್ಲಾ ವಸ್ತುಗಳು ತುಂಬಿವೆಯೋ ಅವೆಲ್ಲವೂ ಬ್ರಹ್ಮಾಂಡದಲ್ಲಿ ಕೂಡ ಇವೆ. ಎಷ್ಟರ ಮಟ್ಟಿಗೆಯೆಂದರೆ ಹೊರಗಿರುವ ಚಿನ್ನ ಮತ್ತು ಕಬ್ಬಿಣದ ಗಣಿಗಳು ಕೂಡ ನಮ್ಮ ಶರೀರದಲ್ಲಿವೆ. ನಮ್ಮ ರಕ್ತದಲ್ಲಿರುವ ಧಾತುಗಳಲ್ಲಿ ಕಬ್ಬಿಣವೂ ಇದೆ, ತಾಮ್ರವೂ ಇದೆ, ಬೆಳ್ಳಿಯೂ ಇದೆ. ಈ ಎಲ್ಲ ವಸ್ತುಗಳು ಬ್ರಹ್ಮಾಂಡದಲ್ಲಿವೆ. ಅವು ಪಿಂಡದಲ್ಲಿಯೂ ಇವೆ. ಯಾವಾಗ ಶರೀರವೇ

ಬ್ರಹ್ಮಾಂಡವಾಗಿರುವಾಗ ಪೃಥ್ವಿ, ಆಪ, ತೇಜ, ವಾಯು, ಅಕಾಶ ಈ ಎಲ್ಲ ವಸ್ತುಗಳ ಬಲದಿಂದ ನಿರ್ಭಯ ಪೂರ್ವಕ ಪ್ರೇಮದಿಂದ ಅವುಗಳ ಉಪಯೋಗ ಮಾಡಿಕೊಂಡರೆ ಬಹಳಷ್ಟು ರೋಗಗಳು ನಿವಾರಣೆಗೊಳ್ಳುವವು.

ಮೇಘ ಮನ್ನಂ ವಿಂದತೆ

ಮೂಘ ಮನ್ನಂ ವಿಂದತೆ ಅಪ್ರಚೇತಾಃ ಸತ್ಯಂ ಬ್ರವೀಮಿವದ ಇತ್‌ಧತಸ್ಯ
ನಾರ್ಯಮಣಂ ಪುಷ್ಯತಿ ನೋ ಸಖಾಯಂ ಕೇವಲಾಘೋ ಭವತಿ ಕೇವಲಾದೀ

ಅವಿವೇಕಿ ಮನುಷ್ಯನು ಅನಾವಶ್ಯಕವಾಗಿ ಅನ್ನದ ಗುಡ್ಡೆಯನ್ನು ಮಾಡುವುದಿಲ್ಲ. ನಾನು ನಿಜ ಹೇಳುತ್ತಾ ಇದ್ದೇನೆ. ಯಾರು ಅನ್ನದ ಸಂಗ್ರಹವನ್ನು ಮಾಡುತ್ತಾರೋ ಅವರು ಮೃತ್ಯುವಿನ ಸಂಗ್ರಹ ಮಾಡುತ್ತಿರುತ್ತಾರೆ. ಯಾರು ಉದಾರವಾದ ಸೃಷ್ಟಿಯ ಸಮಾಜದ ಪೋಷಣೆ ಮಾಡುವುದಿಲ್ಲವೊ ಮತ್ತು ಒಬ್ಬನೇ ತಿನ್ನುತ್ತಾನೋ ಅವನು ಪಾಪವನ್ನು ತಿನ್ನುತ್ತಾನೆ. ಇದಕ್ಕಿಂತ ಕಠಿಣವಾದ ಶಾಪ ಇನ್ನಾವುದಿರುಲು ಸಾಧ್ಯ? ಯಾರು ತಮ್ಮ ವೃದ್ಧರ ಮತ್ತು ಸರಿ ಸಮಾನರ ಸೇವೆ ಮಾಡುವುದಿಲ್ಲವೋ ಮತ್ತು ಒಬ್ಬನೇ ತಿನ್ನುತ್ತಾನೋ ಅವನು ಪಾಪಿ. ಇದು ವೇದದ ಉದ್ಗಾರ. "ಪರಿಶ್ರಮ ಮಾಡದೇ ಇರುವವನಿಗೆ ತಿನ್ನುವ ಅಧಿಕಾರವಿಲ್ಲ" ಇದು ಭಾರತ ಭೂಮಿಯ ವಿಚಾರ. **ಆರ್ಯಮಣಂ** ಅಂದರೆ ಉದಾರ ಭಾವನೆಯವನು. ಈ ಸಂಜ್ಞೆಯನ್ನು ಸೃಷ್ಟಿ ದೇವತೆಗಾಗಿ ಕೊಟ್ಟಿದೆ. **ಪುಷ್ಯತಿ ನೊ ಸಖಾಯಂ** ಅಂದರೆ ಸಕಲ, ಸಮಾಜದ ಪೋಷಣೆ ಮಾಡುವುದಿಲ್ಲವೋ. ಯಾರು ತನ್ನ ಸಹೋದರರ ಪೊಷಣೆ ಮಾಡುವುದಿಲ್ಲವೋ, ನೆರವಾದವರ ಪೋಷಣೆ ಮಾಡುವುದಿಲ್ಲವೋ ಆತ ಅನ್ನ ತಿನ್ನುವುದಿಲ್ಲ. ಪಾಪವನ್ನೇ ತಿನ್ನುತ್ತಾನೆ.

ಋಷಿ ಅಪಾಯದ ಸೂಚನೆ ಕೊ ಡುತ್ತಿದ್ದಾನೆ. **ವದ ಇತ್ ಸ ತಸ್ಯ.** ಅದು ಅವನ ಮೃತ್ಯು. ನಿನಗಾಗಿ ಅನ್ನದ ಭಂಡಾರವನ್ನು ತುಂಬಿಡಲಾಗಿದೆ ಎಲ್ಲೂ ನೀನು ಅನ್ನವನ್ನು ಪ್ರಾಪ್ತಮಾಡಿರುವುದಿಲ್ಲ. ನೀನು ಮೃತ್ಯುವನ್ನು ಸಂಪಾದಿಸಿದ್ದಿಯೇ, ಮೃತ್ಯುವನ್ನು; ಋಷಿ ಹೇಳುತ್ತಾನೆ– "ನೀನು ಒಬ್ಬನೇ ತಿಂದಲ್ಲಿ ಪಾಪದ ಮೂರ್ತಿಯಾಗಿ ಬಿಡುವೆ. ನಿನಗೆ ದೊರೆತಿರುವ ತುಂಬಿದ ಅನ್ನಭಂಡಾರ ವ್ಯರ್ಥ. ಅದು ನಿನ್ನ ಮರಣದ ಸಂಗ್ರಹ. ಯಾರು ಎರಡನೆಯವರನ್ನು ಪೋಷಿಸುವುದಿಲ್ಲವೋ ಅವನ ಬಳಿ ಇರುವುದು ಅವನ ಮೃತ್ಯು". ಸಮಾಜಕ್ಕೆ ಕೊಡದೇ ಸಂಗ್ರಹಿಸಿ ಇಟ್ಟುಕೊಳ್ಳುವುದು ಅಂದರೆ ಮೃತ್ಯುವನ್ನೇ ಪ್ರಾಪ್ತ ಮಾಡಿಕೊಂಡಂತೆ. ವೇದ ಮಾತೆ ನಿನಗೆ ಈ ಮಾತನ್ನು ಹೇಳುತ್ತಿದ್ದಾಳೆ. ವೇದ ಮಾತೆಗಿಂತ ಹೆಚ್ಚಿನ ಹಿತ ವುಳ್ಳ ಮಾತನ್ನು ಯಾರು ಹೇಳುತ್ತಾರೆ? ಶ್ರುತಿ ಮಾತೆ ನಿನಗೆ ಎಚ್ಚರಿಕೆ ಕೊಡುತ್ತಿದ್ದಾಳೆ. ನಿಮ್ಮ ಹಿತದ ಮಾತನ್ನು ಹೇಳುತ್ತಿದ್ದಾಳೆ. ಇಷ್ಟು ಸ್ಪಷ್ಟ ಶಬ್ದಗಳಲ್ಲಿ ಅಪಾಯದ ಸೂಚನೆಯನ್ನು ಬೇರೆ ಇನ್ನಾರೂ ಕೊಡಲು ಸಾಧ್ಯವಿಲ್ಲ. ಗೀತೆ ಕೂಡ ಹೇಳಿದೆ –

ಭುಂಜತೆ ತೆ ತ್ವಘಂ ಪಾಪಾ ಯೇ ಪಚಂತ್ಯಾತ್ಮಕಾರಣಾತ್

ಯಾರು ತಮಗಾಗಿ ಸಂಗ್ರಹ ಮಾಡುತ್ತಾರೋ ಅವರು ಪಾಪ ತಿನ್ನುತ್ತಾರೆ. ನಾವು ಸಮಾಜಕ್ಕೆ ಅರ್ಪಿಸದೆ ನಮ್ಮ ಹಕ್ಕನ್ನು ಸ್ಥಾಪಿಸುವುದಾದರೆ ಅದು ಪ್ರಸಾದ ಸೇವೆನೆಯಾಗುವುದಿಲ್ಲ. ಸಮರ್ಥ ರಾಮದಾಸ್ ಕೂಡ "ನೀವು ಹಾಲು ಕುಡಿಯಿರಿ, ಹೊಟ್ಟೆ ತುಂಬ ತಿನ್ನಿರಿ. ಆದರೆ ಮನೆಯಲ್ಲಿ ಸಂಗ್ರಹ ಮಾಡಬೇಡಿ. ಹೊಟ್ಟೆ ತುಂಬ ತಿಂದು ಉಳಿದದ್ದನ್ನು ಕೊಡಿ. ಅನ್ನದ ಮೇಲೆ ಕಾವಲು ನಾಗನಂತೆ ಕುಳಿತುಕೊಳ್ಳಬೇಡಿ" ಎಂದು ಹೇಳುತ್ತಾರೆ.

(ಮುಂದುವರಿಯುತ್ತದೆ...)

* * *

ಆತ್ಮಗುಣಗಳ ವೈಭವ

– ಎಚ್.ವಿ.ನಾಗರಾಜರಾವ್

ಆತ್ಮಗುಣಗಳು ಯಾವುವು, ಅವು ಎಷ್ಟು, ಅವುಗಳ ಸ್ವರೂಪವೇನೆಂದು ತಿಳಿದುಕೊಳ್ಳೋಣ.

"ಅಥಾಷ್ಟಾವಾತ್ಮಗುಣಾಃ" ಎಂಬ ಸೂತ್ರ ಆತ್ಮಗುಣ ಎಂಟು ಎಂದು "ದಯಾಭೂತೇಷು ಕ್ಷಾಂತಿರನಸೂಯಾ ಶೌಚಮನಾಯಾಸೋ ಮಂಗಲಮಕಾರ್ಪಣ್ಯಮಸ್ಪೃಹೇತಿ।" ಎಂಬ ಸೂತ್ರ ತಿಳಿಸುತ್ತದೆ. ಭೂತಗಳಲ್ಲಿ ದಯೆ, ಕ್ಷಮೆ, ಅಸಸೂಯೆ, ಶೌಚ, ಅನಾಯಾಸ, ಮಂಗಳ, ಅಕಾರ್ಪಣ್ಯ, ಅಸ್ಪೃಹಾ ಎಂಬುವು ಎಂಟು ಆತ್ಮಗುಣಗಳೆಂದು ಹೇಳುತ್ತದೆ.

ದಯೆ ಅಂದರೆ ಕರುಣೆ; ಭೂತೇಷು ಎಂದರೆ ಪ್ರಾಣಿಗಳಲ್ಲಿ; ಪ್ರಾಣಿಗಳೆಂದರೆ ಪಶುಪಕ್ಷಿಗಳು ಮಾತ್ರವಲ್ಲ. ಸ್ಥಾವರ ಎನ್ನಿಸಿಕೊಳ್ಳುವ ಅಂದರೆ ಅಚಲವಾದ, ವೃಕ್ಷಾದಿಗಳೂ ಪ್ರಾಣಿಗಳೇ. ಇವುಗಳಲ್ಲೆಲ್ಲಾ ಅಂದರೆ, ಅವುಗಳ ಹಿತಚಿಂತನೆ ಮುಖ್ಯವಾದ ಅತ್ಮಗುಣ. ಇದನ್ನು ಪುರಾಣಗಳೂ ಒತ್ತಿ ಹೇಳಿವೆ.

ಆತ್ಮವತ್ ಸರ್ವಭೂತೇಷು ಯಃ ಶಿವಾಯ ಹಿತಾಯ ಚ ।
ವರ್ತತೇ ಸತತಂ ಹೃಷ್ಟಃ ಕೃತ್ಸ್ನಾ ಹ್ಯೇಷಾ ದಯಾ ಸ್ಮೃತಾ ॥

ತನ್ನಂತೆ ಎಲ್ಲಾ ಪ್ರಾಣಿಗಳೂ ಎಂದು ಭಾವಿಸಿದಾಗ ಅವುಗಳಿಗೆ ಹಿಂಸೆಯನ್ನು ಮಾಡುವ ಬುದ್ಧಿಯೇ ಹುಟ್ಟುವುದಿಲ್ಲ. ಆಗ ಮನುಷ್ಯ ಅವುಗಳ ಹಿತವನ್ನೇ ಬಯಸಿ ಆಚರಿಸುತ್ತಾನೆ. ಅದರಿಂದ ಆತ್ಮ ಸಂತೋಷವೂ ಉಂಟಾಗುತ್ತದೆ. ಈ ಅಂಶವನ್ನು ಭಗವದ್ಗೀತೆಯೂ ಒತ್ತಿ ಹೇಳಿದೆ. ದೈವೀ ಸಂಪತ್ತನ್ನು ವರ್ಣಿಸುವಾಗ ಹದಿನಾರನೆಯ ಅಧ್ಯಾಯದ ಆರಂಭದಲ್ಲಿ ಶ್ರೀಕೃಷ್ಣನು ಹೇಳುತ್ತಾನೆ...

ಅಹಿಂಸಾ ಸತ್ಯಮಕ್ರೋಧಸ್ತ್ಯಾಗಃ ಶಾಂತಿರಪೈಶುನಮ್ ।
ದಯಾ ಭೂತೇಷ್ವ ಲೋಲುಪ್ತ್ವಂ ಮಾರ್ದವಂ ಹ್ರೀರಚಾಪಲಮ್ ॥
ತೇಜಃ ಕ್ಷಮಾ ಧೃತಿಃ ಶೌಚಮುದ್ರೋಹೋ ನಾತಿಮಾನಿತಾ ।
ಭವಂತಿ ಸಂಪದಂ ದೈವೀಮಭಿಜಾತಸ್ಯ ಭಾರತ ॥

ಅಹಿಂಸೆ, ಸತ್ಯ, ಕೋಪ ಮಾಡಿಕೊಳ್ಳದಿರುವಿಕೆ, ತ್ಯಾಗ, ಶಾಂತಿ, ಒಬ್ಬರ ಮೇಲೆ ಇನ್ನೊಬ್ಬರ ಬಳಿ ಚಾಡಿ ಹೇಳದಿರುವಿಕೆ, ಎಲ್ಲ ಭೂತಗಳಲ್ಲಿ ಕರುಣೆ, ವಿಷಯ ಸುಖದಲ್ಲಿ ಅತ್ಯಾಸಕ್ತಿ ಇಲ್ಲದಿರುವಿಕೆ, ಮೃದು ಸ್ವಭಾವ, ತಪ್ಪು ಮಾಡಿದಾಗ ನಾಚಿಕೆ, ಚಪಲತೆ ಇಲ್ಲದಿರುವಿಕೆ, ತೇಜಸ್ಸು, ಕ್ಷಮೆ, ಧೈರ್ಯ, ಶುಚಿತ್ವ, ಯಾರಿಗೂ ದ್ರೋಹ ಮಾಡದಿರುವಿಕೆ, ಅಧಿಕವಾಗಿ ಅಭಿಮಾನ ಪಡದಿರುವಿಕೆ – ಇವೆಲ್ಲ ದೈವೀ ಸಂಪತ್ತನ್ನು ಹೊಂದಿರುವವರ ಲಕ್ಷಣಗಳು.

ಗೀತೆಯಲ್ಲಿ ಹೇಳಿರುವ ದಯಾ ಭೂತೇಷು, ಶೌಚ ಎಂಬ ಎರಡನ್ನೂ ಧರ್ಮಸೂತ್ರದಲ್ಲಿ ಅದೇ ಶಬ್ದಗಳಿಂದ ಹೇಳಿರುವುದನ್ನು ಗಮನಿಸಬೇಕು.

ಕ್ಷಾಂತಿ ಎಂದರೆ ಕ್ಷಮೆ, ಇದನ್ನೇ ಸಹನೆಯೆಂದೂ ತಿತಿಕ್ಷೆ ಎಂದೂ ಕರೆಯುತ್ತಾರೆ. ಬಾಹ್ಯ ಜಗತ್ತಿನ ಶೀತೋಷ್ಣಾದಿ ದ್ವಂದ್ವಗಳನ್ನೂ ಆಭ್ಯಂತರ ಜಗತ್ತಿನ (ಎಂದರೆ ಒಳಗಿನ ಪ್ರಪಂಚದ) ರಾಗದ್ವೇಷಾದಿ ದ್ವಂದ್ವಗಳನ್ನೂ ಸಹಿಸಿಕೊಳ್ಳುವ ಗುಣವೇ ಕ್ಷಾಂತಿ. ಬೇರೆಯವರು ತಪ್ಪುಗಳನ್ನೆಸಗಿದಾಗಲೂ ದಂಡಿಸದೆ ಕ್ಷಮಿಸುವುದು ಕ್ಷಾಂತಿ. ಇದನ್ನು ಹೀಗೆ ವಿವರಿಸುತ್ತಾರೆ –

ಅಕ್ರುಷ್ಟೋಽಭಿಹತೋ ವಾಪಿ ನಾಕ್ರೋಶೇನ್ನಾಪಿ ತಾಡಯೇತ್ ।
ಅದುಷ್ಟೋ ವಾನಃ ಕಾಯೈಃ ಸಾ ತಿತಿಕ್ಷಾ ಕ್ಷಮಾ ಮಾತಾ ॥

ಯಾರೋ ನಿಂದಿಸಬಹುದು, ಬಯ್ಯಬಹುದು, ಹೊಡೆಯಬಹುದು. ಆಗಲೂ ಪ್ರತಿಯಾಗಿ ನಿಂದಿಸದೆ, ತಾನು ಹೊಡೆಯಲು ಹೋಗದೇ ತ್ರಿಕರಣಗಳಿಂದ ಶುದ್ಧವಾಗಿ ನಿಲ್ಲುವುದು ಕ್ಷಮೆ. ಎಂದರೆ ಶಾರೀರಿಕವಾಗಿ ಪ್ರತಿಕ್ರಿಯೆ ಮಾಡದಿರುವುದಷ್ಟೇ ಅಲ್ಲದೇ, ಮಾತಿನಲ್ಲೂ ಮನಸಸಿನಲ್ಲೂ ಯಾವ ಆಕ್ರೋಶವನ್ನೂ ಹೊಂದದೆ ಇರುವುದು ನಿಜವಾದ ಕ್ಷಮೆ. ಇದನ್ನೇ ವೇದಾಂತದಲ್ಲಿ 'ತಿತಿಕ್ಷಾ' ಎಂದು ಕರೆಯುತ್ತಾರೆ. ವಿವೇಕಚೂಡಾಮಣಿಯಲ್ಲಿ ಶ್ರೀ ಶಂಕರಾಚಾರ್ಯರು –

ಸಹನಂ ಸರ್ವದುಃಖಾನಾಮಪ್ರತೀಕಾರಪೂರ್ವಕಮ್ ।
ಚಿಂತಾವಿಲಾಪರಹಿತಂ ಸಾ ತಿತಿಕ್ಷಾ ನಿಗದ್ಯತೇ ॥

ಎಲ್ಲ ದುಃಖಗಳನ್ನು ಪ್ರತೀಕಾರರಹಿತವಾಗಿ ಸಹಿಸಬೇಕು. ಚಿಂತೆ ಮಾಡಬಾರದು, ಕೂಗಾಡಬಾರದು, ಇದು ತಿತಿಕ್ಷಾ ಎಂದಿದ್ದಾರೆ.

ಅನಸೂಯಾ ಎಂದರೆ ಅಸೂಯೆ ಪಡದಿರುವುದು. ಏಕೆ ಅಸೂಯೆ ಹುಟ್ಟುತ್ತದೆ? ನಮಗಿಂತ ಇತರರಲ್ಲಿ, ನಮ್ಮ ಸ್ಪರ್ಧಿಗಳಲ್ಲಿ ಹೆಚ್ಚಾದ ಗುಣಗಳು ಕಂಡುಬಂದರೆ ಆಗ ಹುಟ್ಟುವ ಅಸಹನೆ ಅಸೂಯೆಯಾಗಿ ಪರಿಣಮಿಸುತ್ತದೆ. ಅನಸೂಯಾ ಎಂಬುದು ಇದಕ್ಕೆ ವಿರುದ್ಧವಾದ ಸದ್ಗುಣ. ಅದನ್ನಿಂತು ವಿವರಿಸಿದ್ದಾರೆ.

ಯೋ ಧರ್ಮಮರ್ಥಂ ಕಾಮಂ ವಾ ಲಭತೇ ಮೋಕ್ಷಮೇವ ವಾ ।
ನ ದ್ವಿಷ್ಯಾತ್ ತಂ ಸದಾ ಪ್ರಾಜ್ಞಃ ಅನಸೂಯೇತಿ ಸ್ಮೃತಾ ॥

ಬೇರೆಯವರು ನಮಗಿಂತ ಅಧಿಕವಾಗಿ ದರ್ಮಾರ್ಥಕಾಮಮೋಕ್ಷಗಳನ್ನು ಬೇಗನೆ ಪಡೆದುಕೊಳ್ಳಬಹುದು. ಆಗ ಅವರ ಮೇಲೆ ದ್ವೇಷವನ್ನು ತೋರಿಸಬಾರದು. ಮನಸ್ಸಿನಲ್ಲೂ ದ್ವೇಷಕ್ಕೆ ಸ್ಥಳ ನೀಡಬಾರದು. ಇದನ್ನು ಅನಸೂಯಾ ಎನ್ನುತ್ತಾರೆ. ಅಸೂಯೆಗೆ ಇಂಗ್ಲೀಷಿನಲ್ಲಿ ಜಲಸೀ ಎನ್ನುತ್ತಾರೆ. ಅದರ ಆತ್ಯಂತಾಭಾವವೇ ಅನಸೂಯೆ.

ನಾಲ್ಕನೆಯ ಆತ್ಮಗುಣವನ್ನು "ಶೌಚ" ಎಂದು ಕರೆದಿದ್ದಾರೆ. ಶೌಚ ಎಂದರೆ ಶುಚಿತ್ವ, ಶಾರೀರಿಕವಾದ ಶುಚಿತ್ವವು ಸ್ನಾನಾದಿಗಳಿಂದ ಬರುತ್ತದೆ. ಸ್ವಾಭಾವಿಕವಾಗಿ ಶರೀರದಲ್ಲಿ ಮಲ, ಮೂತ್ರ, ಸ್ವೇದ ಇತ್ಯಾದಿ ಅಶುಚಿದ್ರವ್ಯಗಳು ಸತತವಾಗಿ ಹುಟ್ಟುತ್ತಿರುತ್ತವೆ. ಇವುಗಳ ನಿವಾರಣೆಗಾಗಿ ಸ್ನಾನ, ದಂತಧಾವನಾದಿಗಳನ್ನು ಮಾಡುತ್ತಿರಬೇಕು. ಅಲ್ಲದೇ ಸುತ್ತಮುತ್ತಲಿನ ಪರಿಸರವನ್ನೂ ಶುಚಿಯಾಗಿಟ್ಟುಕೊಳ್ಳಬೇಕು. ಶುಚಿಯಾಗಿರುವ ಪ್ರದೇಶವೇ ಭಗವಂತನ ನೆಲೆ ಎಂದು ಅದರ ತಾತ್ಪರ್ಯ. ಹೀಗೆ

ಬಾಹ್ಯವಾದುದು ಮಾತ್ರ ಶುಚಿತ್ವವಲ್ಲ.

ದ್ರವ್ಯಶೌಚಂ ಮನಶ್ಶ್ಯೌಚಂ ವಾಕ್‌ಶೌಚಾ ಕಾಯಿಕಂ ತಥಾ ।
ಶೌಚಂ ಚತುರ್ವಿಧಂ ಪ್ರೋಕ್ತಂ ಋಷಿಭಿಸ್ತತ್ತ್ವದರ್ಶಿಭಿಃ ॥

ತತ್ತ್ವದರ್ಶಿಗಳಾದ ಋಷಿಗಳು ಶೌಚವು ನಾಲ್ಕು ವಿಧವಾದುದೆಂದು ಹೇಳುತ್ತಾರೆ. ದ್ರವ್ಯಶೌಚ, ಮನಸ್ಸಿನ ಶೌಚ, ಮಾತಿನ ಶೌಚ ಮತ್ತು ಕಾಯಿಕ ಶೌಚ. ಯಾವುದೇ ಕಾರ್ಯಕ್ಕೆ ಉಪಯೋಗಿಸುವ ಪದಾರ್ಥಗಳು ದ್ರವ್ಯಗಳು. ಅವು ಶುದ್ಧವಾಗಿರಬೇಕು. ಇದು ದ್ರವ್ಯಶೌಚ. ದ್ರವ ಎಂಬ ಶಬ್ದಕ್ಕೆ ಹಣ ಎಂಬ ಅರ್ಥವೂ ಇದೆ. ಯಜ್ಞಯಾಗಾದಿಗಳಿಗೆ, ಅತಿಥಿಸತ್ಕಾರಕ್ಕೆ, ಪುಣ್ಯಕಾರ್ಯಗಳಿಗೆ ಬಳಸುವ ಹಣ ನ್ಯಾಯಮಾರ್ಗದಲ್ಲಿ ಗಳಿಸಿದುದಾಗಿರಬೇಕು. ಮೋಸದಿಂದ, ಅಸತ್ಯದಿಂದ ಸಂಪಾದಿಸಿದ ಹಣ ಅಶುಚಿ ಅರ್ಥ ಶೌಚವು ಎಲ್ಲ ಶೌಚಗಳಿಗಿಂತಲೂ ಮುಖ್ಯ ಎನ್ನುವುದು ಋಷಿಗಳ ಅಭಿಪ್ರಾಯ.

ಸರ್ವೇಷಾಮೇವ ಶೌಚಾನಾಮರ್ಥಶೌಚಂ ಪ್ರಶಸ್ಯತೇ ।
ಯೋರ್ಥೇ ಶುಚಿಃ ಸ ಹಿ ಶುಚಿರ್ನಮೃದ್ವಾದಿಶುಚಿಃ ॥

ಎಲ್ಲ ವಿಧವಾದ ಶುಚಿತ್ವಕ್ಕಿಂತ ಹಣದ ಬಗೆಗೆ ಶುಚಿಯಾಗಿರುವುದು ಮುಖ್ಯ. ಅರ್ಥದಲ್ಲಿ ಶುಚಿಯಾಗಿರುವವನೇ ಶುಚಿ. ಸೋಪು, ನೀರುಗಳಿಂದ ಮೈತೊಳೆದುಕೊಂಡವನಲ್ಲ – ಎನ್ನುತ್ತದೆ ಈ ಶ್ಲೋಕ.

ಮನಸ್ಸಿನ ಶುಚಿತ್ವವಂತೂ ಇನ್ನೂ ಮುಖ್ಯ. ಕೊಳಕಾದ ಮನಸ್ಸಿನಿಂದ ಮಾಡುವ ಕೆಲಸ ಆತ್ಮಹಾನಿಯನ್ನು ತರುತ್ತದೆ. ಮಾತೂ ಶುದ್ಧವಾಗಿರಬೇಕು. ಅದರಲ್ಲಿ ದ್ವೇಷ, ದ್ರೋಹ, ತಿರಸ್ಕಾರ, ನಿಂದೆ ಮುಂತಾದವು ಇರಬಾರದು. ಕಾಯಿಕ ಶೌಚದ ಬಗೆಗೆ ಮೊದಲೇ ಹೇಳಿದೆ.

ಐದನೆಯ ಆತ್ಮಗುಣ ಅನಾಯಾಸ. ಯಾವ ಕೆಲಸವು ಶರೀರಕ್ಕೂ ಮನಸ್ಸಿಗೂ ಆತ್ಮನಿಗೂ ಆಯಾಸವನ್ನು ತರುವುದೋ ಅಂಥ ಕೆಲಸವನ್ನು ವರ್ಜಿಸುವುದೇ ಅನಾಯಾಸ. ಸುಳ್ಳು ಹೇಳಿದರೆ ಅದು ಹೊರಬೀಳಬಹುದೆಂಬ ಆತಂಕ. ಅದನ್ನು ಮುಚ್ಚಿಹಾಕಲು ಇನ್ನಷ್ಟು ಸುಳ್ಳು. ಇದು ಮನಸ್ಸಿಗೂ ಆತ್ಮನಿಗೂ ಆಯಾಸವನ್ನು ತರುವ ಕಾರ್ಯ. ತನಗೆ ತಾನೇ ಪೀಡೆಯನ್ನು ತಂದುಕೊಳ್ಳುವುದು ಆಯಾಸ. ಅದನ್ನು ಮಾಡದಿರುವುದು ಅನಾಯಾಸ.

ಯದಾರಂಭೇ ಭವೇತ್ ಪೀಡಾ ನಿತ್ಯಮತ್ಯಂತಮಾತ್ಮನಃ ।
ತದ್ ವರ್ಜಯೇದ್ ಧರ್ಮ್ಯಮಪಿ ಅನಾಯಾಸಸ್ಸ ಉಚ್ಯತೇ ॥

ಧರ್ಮಕ್ಕೆ ಅವಿರುದ್ಧವಾದರೂ ಕಾರ್ಯವು ಆಯಾಸಕರವಾದರೆ ವರ್ಜಿಸಬೇಕು. ಆತ್ಮಕ್ಕೆ ದ್ರೋಹವನ್ನು ಮಾಡಿ ಅಥವಾ ಪೀಡೆಯನ್ನು ಅನುಭವಿಸಿ ಯಾವ ಕಾರ್ಯವನ್ನೂ ಮಾಡಬೇಕಾಗಿಲ್ಲ. ಇದು ಅನಾಯಾಸವೆಂಬ ಆತ್ಮಗುಣ. ಮಂಗಳ ಎಂಬುದು ಆರನೆಯ ಆತ್ಮಗುಣ. ಮನುಷ್ಯನು ಪ್ರಶಸ್ತವಾದ, ಎಲ್ಲರಿಗೂ ಹಿತವನ್ನು ಉಂಟುಮಾಡುವ ಕಾರ್ಯಗಳನ್ನು ಮಾಡಬೇಕು. ಅಮಂಗಳ ಕಾರ್ಯದಲ್ಲಿ ತನ್ನನ್ನು ತೊಡಗಿಸಿಕೊಳ್ಳಬಾರದು.

ಪ್ರಶಸ್ತಾಚರಣಂ ನಿತ್ಯಮಪ್ರಶಸ್ತವಿವರ್ಜನಮ್ ।

ಏತದ್ಧಿ ಮಂಗಲಂ ಪ್ರೋಕ್ತಂ ಮುನಿಭಿಸ್ತತ್ತ್ವದರ್ಶಿಭಿಃ ॥

ಯಾವಾಗಲೂ ಪ್ರಶಸ್ತವಾದ ಕಾರ್ಯವನ್ನು ಮಾಡುವುದು, ಅಪ್ರಶಸ್ತವಾದುದನ್ನು ತ್ಯಜಿಸುವುದು ಮಂಗಳವೆಂದು ತತ್ತ್ವಜ್ಞರಾದ ಋಷಿಗಳು ಹೇಳುತ್ತಾರೆ.

ಅಕಾರ್ಪಣ್ಯ ಏಳನೆಯ ಆತ್ಮಗುಣ. ಕಾರ್ಪಣ್ಯವಿಲ್ಲದೆ ಜೀವಿಸುವುದು ಅಕಾರ್ಪಣ್ಯ. ಕಾರ್ಪಣ್ಯ ಎಂದರೆ ಕೃಪಣತೆ ಅಥವಾ ಜಿಪುಣತನ. ಅಕಾರ್ಪಣ್ಯ ಎಂದರೆ ಉದಾರತೆ, ತನ್ನಲ್ಲಿರುವುದನ್ನು ಅವಶ್ಯಕತೆ ಇದ್ದವರಿಗೆ ಹಂಚುವ ಬುದ್ಧಿ. ಅತ್ಯಂತ ಕಷ್ಟದಲ್ಲಿದ್ದಾಗಲೂ ಯಾರಬಳಿಯೂ ದೀನನಾಗಿ ಬೇಡದಿರುವುದು ಅಕಾರ್ಪಣ್ಯ. ಈ ಎರಡೂ ಅಕಾರ್ಪಣ್ಯದ ಅಂಗಗಳು. ಇದನ್ನು ಕೆಳಗಿನ ಶ್ಲೋಕವು ಸ್ಪಷ್ಟೀಕರಿಸುತ್ತದೆ.

ಆಪದ್ಯಪಿ ಚ ಕಷ್ಟಾಯಾಂ ಭವೇದ್ದೀನೋ ನ ಕಸ್ಯಚಿತ್ ।
ಸಂವಿಭಾಗರುಚಿಶ್ಚ ಸ್ಯಾದಕಾರ್ಪಣ್ಯಂ ತದುಚ್ಯತೇ ॥

ಸಂವಿಭಾಗ ಎಂದರೆ ತನ್ನ ಸಂಪತ್ತನ್ನು ಹಲವರಿಗೆ ಹಂಚುವುದು. ಸಾಮಾನ್ಯ ಸಂದರ್ಭದಲ್ಲಿ ಹೆಮ್ಮೆಯಿಂದ ಮೆರೆಯುವವರೂ ಆಪತ್ತು ಬಂದಾಗ ದೈನ್ಯದಿಂದ ಯಾರಯಾರ ಬಳಿಯೋ ಹೋಗಿ ಕೈಕಟ್ಟಿ ನಿಲ್ಲುವುದನ್ನು ನೋಡುತ್ತೇವೆ. ಇದು ಕೃಪಣತೆ. ಈ ದೈನ್ಯವು ಸತ್ಪುರುಷರಿಗೆ ಸಲ್ಲದು.

'ಅನಾಯಾಸೇನ ಮರಣಂ ವಿನಾ ದೈನ್ಯೇನ ಜೀವನಮ್' ಎಂಬುದು ಅವರ ಜೀವನದ ತತ್ತ್ವ.

ಅಸ್ಪೃಹಾ ಎಂಬುದು ಎಂಟನೆಯ ಆತ್ಮಗುಣ. ಸ್ಪೃಹಾ ಎಂದರೆ ಅತಿಯಾದ ಆಸೆ. ಎಲ್ಲ ನನಗೇ ಬೇಕು ಎಂಬ ಅಪೇಕ್ಷೆ. ಈ ಸ್ಪೃಹೆಗೆ ಕೊನೆಯಿಲ್ಲ. ತುಂಬಿಸಲಾಗದ ತೂತು ಮಡಿಕೆಯಂತೆ ಅದು. ಈ ಸ್ಪೃಹೆಗೆ ವಿರುದ್ಧವಾದುದು ಅಸ್ಪೃಹೆ. ಇದ್ದುದರಲ್ಲಿ ತೃಪ್ತಿ ಹೊಂದುವುದು, ಪರರ ಧನಕ್ಕೆ ಆಸೆ ಪಡದಿರುವುದು ಅಸ್ಪೃಹೆ.

ವಿವರ್ಜಯೇದಸಂತೋಷಂ ವಿಷಯೇಷು ಸದಾ ನರಃ ।
ಪರದ್ರವ್ಯಾಭಿಲಾಷಂ ಚ ಸಾ ಸ್ಪೃಹಾ ಕಥ್ಯತೇ ಬುಧೈಃ ॥

ಈ ಎಲ್ಲ ಆತ್ಮಗುಣಗಳು ಸಕಲ ಪುರುಷಾರ್ಥ ಸಾಧನಗಳು. ಒಂದೊಂದು ಆತ್ಮಗುಣಕ್ಕೇ ವಿಶಿಷ್ಟವಾದ ಫಲವಿದೆಯೆಂದು ಮುನಿಗಳು ಹೇಳುತ್ತಾರೆ.

ಕ್ಷಮಾವಾನ್ ಜಯತೇ ಭೂಮಿಂ ದಯಾವಾನ್ ಸುಖಮಶ್ನುತೇ ।
ಅನಸೂಯರ್ಲಭೇತ್ ಸ್ವರ್ಗಂ ಶೌಚೇನಾಧ್ಯಾತ್ಮಮೇವ ಚ ॥
ಮಂಗಳಾದಪಿ ಸಂಪೂಜ್ಯಃ ಇಹ ಲೋಕೇ ಪರತ್ರ ಚ ।
ಸುರಸಾಮ್ಯಮನಾಯಾಸಾತ್ ಅಕಾರ್ಪಣ್ಯಾತ್ ಪ್ರಕೃತೌ ಲಯಮ್ ॥
ಅಸ್ಪೃಹೋ ಲಭತೇ ನಿತ್ಯಮನಂತಂ ಸುಖಮೇವ ಚ ।
ಸರ್ವೈಸ್ತು ಬ್ರಹ್ಮಣಃ ಸ್ಥಾನಂ ಸಂಸ್ಕಾರೈಸ್ತು ತಥೈವ ಚ ॥

"ಕ್ಷಮೆ" ಎಂಬ ಗುಣವನ್ನುಳವನು ಭೂಮಿಯನ್ನು ಗೆದ್ದು ರಾಜನಾದಾನು. ದಯೆಯುಳ್ಳವನು ಸುಖಿಯಾಗಿರುತ್ತಾನೆ. ಅನಸೂಯಾ ಎಂಬ ಗುಣವನ್ನು ಪಡೆದಿರುವವನು (ಎಂದರೆ ಅಸೂಯೆ ಪಡದಿರುವವನು) ಸ್ವರ್ಗವನ್ನು ಪಡೆಯುತ್ತಾನೆ. ಮಂಗಳ ಎಂಬ ಗುಣದಿಂದ ಮಾನವನು ಈ ಲೋಕದಲ್ಲೂ ಪರಲೋಕದಲ್ಲೂ

ಪೂಜ್ಯನಾಗುವನು. ಅನಾಯಾಸವೆಂಬ ಗುಣವಿದ್ದರೆ ದೇವತೆಗಳ ಸಮಾನತೆ ಸಿಕ್ಕುವುದು. ಅಕಾರ್ಪಣ್ಯದಿಂದ ಪ್ರಕೃತಿಯಲ್ಲಿ ಲೀನನಾಗಲು ಸಾಧ್ಯ. ಅಸ್ಪೃಹಾ ಎಂಬ ಗುಣದಿಂದ ನಿತ್ಯವೂ ಅನಂತವೂ ಆದ ಸುಖವನ್ನು ಪಡೆಯಬಹುದು. ಎಲ್ಲ ಆತ್ಮಗುಣಗಳೂ ಸಂಸ್ಕಾರಗಳೂ ಇದ್ದರೆ ಬ್ರಹ್ಮನ ಸ್ಥಾನವೇ ಲಭ್ಯವಾಗುತ್ತದೆ.

ಇದರಿಂದ ಎಲ್ಲ ಗುಣಗಳನ್ನೂ ಅಳವಡಿಸಿಕೊಳ್ಳಲು ಶಕ್ಯವಾಗದಿದ್ದರೆ, ಕೆಲವನ್ನಾದರೂ ನಮ್ಮದನ್ನಾಗಿ ಮಾಡಿಕೊಳ್ಳಬೇಕು. ಒಂದೊಂದಕ್ಕೂ ಫಲವಿದ್ದೇ ಇದೆ.

ಗರ್ಭಾದಾನ ಮುಂತಾದ ನಲವತ್ತು ಸಂಸ್ಕಾರಗಳಿದ್ದರೂ ವ್ಯಕ್ತಿಯಲ್ಲಿ ಆತ್ಮಗುಣಗಳು ಬೆಳೆಯದಿದ್ದರೆ ಬ್ರಹ್ಮನ ಸಾಯುಜ್ಯವಾಗಲೀ ಸಾಲೋಕ್ಯವಾಗಲೀ ದೊರೆಯಲಾರದು ಎಂದು ಧರ್ಮಸೂತ್ರವು ಸ್ಪಷ್ಟವಾಗಿ ಹೇಳುತ್ತದೆ.

ಯಸ್ಯೈತೇ ಚತ್ವಾರಿಂಶತ್ ಸಂಸ್ಕಾರಾ ನ ಚಾಷ್ಟಾವಾತ್ಮಗುಣಾಃ ।
ನ ಸ ಬ್ರಹ್ಮಣಸ್ಸಾಯುಜ್ಯಂ ಸಾಲೋಕ್ಯಂ ಚ ಗಚ್ಛತಿ

ಬ್ರಹ್ಮಾ ಎಂದರೆ ದೇವತಾವಿಶೇಷ. ಸಾಯುಜ್ಯ ಎಂದರೆ ದೇವತೆಯಲ್ಲಿ ಲೀನವಾಗಿ ಒಂದಾಗುವುದು. ಸಾಲೋಕ್ಯವೆಂದರೆ ದೇವತೆಯು ಯಾವ ಲೋಕದಲ್ಲಿರುವನೋ ಅಲ್ಲಿ ವಾಸಮಾಡುವುದು. ನಲವತ್ತು ಸಂಸ್ಕಾರಗಳೂ ಆಗಿದ್ದರೂ ಆತ್ಮಗುಣಗಳಿಲ್ಲದಿದ್ದರೆ ಆ ಸಂಸ್ಕಾರಗಳ ಫಲ ಇರುವುದಿಲ್ಲ. ಇದರಿಂದ ಸಂಸ್ಕಾರಗಳಿಗಿಂತಲೂ ಆತ್ಮಗುಣಗಳು ಮುಖ್ಯ ಎಂದು ಸೂಚಿಸಿದಂತಾಯಿತು. ಮುಂದಿನ ಸೂತ್ರವು ಈ ವಿಷಯವನ್ನು ಇನ್ನೂ ವಿಶದಪಡಿಸುತ್ತದೆ.

ಯಸ್ಯ ತು ಖಲು ಸಂಸ್ಕಾರಾಣಾಮೇಕದೇಶೋಽಪಿ, ಅಷ್ಟಾವಾತ್ಮಗುಣಾಃ ।
ಅತ ಸ ಬ್ರಹ್ಮಣಃ ಸಾಯುಜ್ಯಂ ಸಾಲೋಕ್ಯಂ ಚ ಗಚ್ಛತಿ ॥

ಯಾವನಿಗೆ ಸಂಸ್ಕಾರಗಳಲ್ಲಿ ಕೆಲವಾದರೂ ಇದ್ದು ಎಂಟೂ ಆತ್ಮಗುಣಗಳಿರುವವೋ ಅವನು ಬ್ರಹ್ಮಸಾಯುಜ್ಯವನ್ನು ಅಥವಾ ಸಾಲೋಕ್ಯಮುಕ್ತಿಯನ್ನು ಪಡೆಯುವನು. ಸಂಸ್ಕಾರಗಳಲ್ಲಿ ಮುಖ್ಯವಾದ ಉಪನಯನ ಒಂದಿದ್ದರೂ ಸಾಕು. ಅದರೊಡನೆ ಆತ್ಮಗುಣಗಳೂ ಸೇರಿದರೆ ವ್ಯಕ್ತಿ ಮುಕ್ತಿಗೆ ಅರ್ಹನಾಗುವನು ಎಂದು ಈ ಸೂತ್ರದ ತಾತ್ಪರ್ಯ. ಸಂಸ್ಕಾರಗಳಲ್ಲಿ ಕೆಲವು ಮತ್ತು ಆತ್ಮಗುಣಗಳಲ್ಲಿ ಕೆಲವು ಒಬ್ಬ ವ್ಯಕ್ತಿಯಲ್ಲಿ ಮೈಗೂಡಿಸಿದರೆ ಆ ವ್ಯಕ್ತಿ ಸಾಲೋಕ್ಯವನ್ನು ಪಡೆಯುವನು. ಎಲ್ಲ ಸಂಸ್ಕಾರಗಳೂ ಎಲ್ಲ ಆತ್ಮಗುಣಗಳೂ ಒಬ್ಬನಲ್ಲಿ ಇದ್ದರೆ ಅವನಿಗೆ ಅತ್ಯುನ್ನತವಾದ ಸಾಯುಜ್ಯವೆಂಬ ಮುಕ್ತಿಯೇ ದೊರೆಯುವುದು. ಇದರಿಂದ ಗುಣಗಳ ಪ್ರಾಮುಖ್ಯ ವಿದಿತವಾಗುತ್ತದೆ. ಯಾವನಲ್ಲಾದರೂ ಸಹಜವಾಗಿಯೇ ಈ ಆತ್ಮಗುಣಗಳು ಇದ್ದರೆ ಪೂರ್ವಜನ್ಮದಲ್ಲಿ ಅವನಿಗೆ ಸಂಸ್ಕಾರಗಳು ಆಗಿರಬಹುದು ಎಂದು ಊಹಿಸಬೇಕು.

(ಸಾಭಾರ : ಜ್ಞಾನ ವಿಜ್ಞಾನ ಸಹಿತಂ ವಿಶೇಷಾಂಕ)

* * *

ಜನಪದ ವ್ಯಕ್ತಿ

ಮೈಕೆಲ್ ಅಂಥೋಣಿ ವಿಂಡೆ

ಎಲ್ಲಿ ಪ್ರಕೃತಿ ವಿಕೋಪವಿದೆಯೋ ಅಲ್ಲಿ ಪ್ರೊ.ಮೈಕೆಲ್ ಅಂಥೋಣಿ ವಿಂಡೆ ಹಾಜರು. ಮಹತ್ಮಾ ಗಾಂಧೀಯವರ ಆದರ್ಶಗಳಿಂದ ಪ್ರಭಾವಿತರಾದ ಅನೇಕ ವಿದೇಶಿಯರಲ್ಲಿ ವಿಂಡಿ ಒಬ್ಬರು. ಮದರ್ ಥೆರೆಸಾ ಮತ್ತು ಜಯಪ್ರಕಾಶ ನಾರಾಯಣರಂಥ ನಾಯಕರೊಂದಿಗೆ ಸಂಪರ್ಕಕ್ಕೆ ಬಂದವರು. ಅತಿದೂರದ, ಅಪರಿಚಿತ ಕಾಡುಗಳ ಮಧ್ಯದಲ್ಲಿರುವ, ಸುಲಭವಾಗಿ ತಲುಪಲಾಗದ ಹಳ್ಳಿಗಳನ್ನೇ ತಮ್ಮ ಸೇವಾ ಕ್ಷೇತ್ರವನ್ನಾಗಿ ಮಾಡಿಕೊಂಡಿದ್ದಂಥವರು "ಗ್ರಾಮಾಭಿವೃದ್ಧಿಗೆ ಗಂಡಾಂತರವೇ ಸೂಕ್ತವಾದ ಘಳಿಗೆ" ಎಂಬುದು ಪ್ರೊ.ವಿಂಡಿಯವರ ನಂಬಿಕೆಯಾಗಿತ್ತು. ಆದ್ದರಿಂದ ೧೯೭೦ರ ದಶಕಗಳಲ್ಲಿ ಬಿಹಾರ್ ಮತ್ತು ಮಧ್ಯ ಪ್ರದೇಶದಲ್ಲಿ ಬರಗಾಲ ಉಂಟಾದಾಗ ಮತ್ತು ೧೯೭೭ರಲ್ಲಿ ಆಂಧ್ರಪ್ರದೇಶದ ಕರಾವಳಿ ಪ್ರದೇಶದಲ್ಲಿ ಚಂಡಮಾರುತ ಅನಾಹುತವುಂಟುಮಾಡಿದಾಗ ವಿಂಡಿಯವರು ಅಲ್ಲಿಯ ಜನರ ಸೇವೆಗಾಗಿ ಸೊಂಟಕಟ್ಟಿ ನಿಂತರು. ಅಲ್ಲಿಗೆ ಒಬ್ಬಂಟಿಗರಾಗಿ ಹೋದರು, ಕೂಡಲೇ ತಮ್ಮ ವಿಚಾರದ ಪ್ರಭಾವದಿಂದ, ವ್ಯಕ್ತಿತ್ವದ ಪ್ರಭಾವದಿಂದ ಯುವಕರ ಸೇವಾ ಪಡೆಯನ್ನೇ ನಿರ್ಮಿಸಿದರು. ತಮ್ಮ ನಲವತ್ತು ವರ್ಷಗಳ ಗ್ರಾಮಾಭಿವೃದ್ಧಿಯ ಸೇವೆಯ ಮೂಲಕ ಆಂಧ್ರ, ಒರಿಸ್ಸಾ, ತಮಿಳುನಾಡು, ಮಹಾರಾಷ್ಟ್ರ, ರಾಜಾಸ್ಥಾನ ಮತ್ತು ಪಾಂಡಿಚೇರಿ ಮುಂತಾದ ಪ್ರದೇಶಗಳಲ್ಲಿ ಐದು ನೂರಕ್ಕೂ ಹೆಚ್ಚು ಹಳ್ಳಿಗಳನ್ನು ಪುನರ್ ನಿರ್ಮಾಣ ಮಾಡಿದರು. ಅವು ಅನಕ್ಷರತೆ ಮತ್ತು ಶೋಷಣೆಗೆ ಒಳಗಾಗಿರುವ ಇತರ ಹಳ್ಳಿಗಳಿಗೆ ಮಾರ್ಗ ಸೂಚಿ ದೀಪಗಳಾಗಿವೆ. ವಿಂಡಿ ಭಾರತಕ್ಕೆ ಬಂದಾದ ಮೇಲೆ ಬಿಹಾರದ ರಾಂಚಿಯಲ್ಲಿ ಒಂದು ಸೇವಾ ಸಂಸ್ಥೆ ಸ್ಥಾಪಿಸಿದರು. ಪ್ರಾರಂಭದಲ್ಲಿ ಇಸಾಯಿ ಪರಿಹಾರ ಸೇವೆಯೆಂದು ನಾಮಕರಣ ಹೊಂದಿದ್ದ ಸಂಸ್ಥೆಗೆ ಗ್ರಾಮ ಪುನರ್ ನಿರ್ಮಾಣ ಸಂಸ್ಥೆಯೆಂದು ನಾಮಕರಣ ಮಾಡಿದರು. ತಮ್ಮ ಈ ಸಂಸ್ಥೆಯ ಸೇವಾ ಕಾರ್ಯಕ್ಕೆ ಎಲ್ಲ ಧರ್ಮದ ಸ್ವಯಂ ಸೇವಕರನ್ನು ಒಗ್ಗೂಡಿಸಿದರು. ಇಂಥ ಎಲೆ ಮರೆಯ ಕಾಯಿಯ ಓರ್ವ ವಿದೇಶಿ ಗ್ರಾಮ ಸೇವಕ, ಗ್ರಾಮ ನಿರ್ಮಾಪಕ ಕಳೆದ ಸೆಪ್ಟಂಬರ್ ೨೦ ರಂದು ತಮ್ಮ ೮೮ನೇ ವಯಸ್ಸಿನಲ್ಲಿ ಬೆಲ್ಜಿಯಂ ದೇಶದ ಹರವರ್ ಲೇ ಎಂಬಲ್ಲಿ ನಿಧನರಾದರು. ೧೯೪೯ರಿಂದ ಭಾರತದಲ್ಲಿ ಮೌನವಾಗಿ ಸೇವೆ ಸಲ್ಲಿಸಿಕೊಂಡಿದ್ದರು. ವಿಂಡಿಯವರ ಅಪೇಕ್ಷೆ ಮೇರೆಗೆ ಅವರ ಅಂತ್ಯಕ್ರಿಯೆ ನಲ್ಲೂರು ಜಿಲ್ಲೆಯ ಸಾಗರಸಗಂ ಎಂಬ ಹಳ್ಳಿಯಲ್ಲಿ ನೆರವೇರಿತು. ಇಂಥ ಮಾನವೀಯ ಸೇವಕನಿಗೆ ಎಲ್ಲರ ಆತ್ಮೀಯ ಕಂಬನಿ.

– ಸುಕೌ

* * *

ಗಾಂಧೀ ಮೈದಾನ ವಿವಾದಕ್ಕೆ ಒಳಗಾಯಿತು

(ಆಂಗ್ಲ ಮೂಲ : ಕೆ.ಜಿ.ಮಲ್ಯ : ಕನ್ನಡಕ್ಕೆ : ಲ.ನರಸಿಂಹಯ್ಯ)

(ಕಳೆದ ಸಂಚಿಕೆಯಿಂದ ಮುಂದುವರಿದದ್ದು...)

"ವಿಜಯ ದಶಮಿ" - ದಸರಾ ಮಹೋತ್ಸವದ ಮುಕ್ತಾಯದ ದಿನ; ಅದರ ಹಿಂದಿನ ದಿನ, ಅ ಮೊದಲೇ ನಿಗದಿಯಾಗಿದ್ದಂತೆ ಪುರಸಭೆಯ ವಿಶೇಷ ಸಭೆ ಸಮಾವೇಶಗೊಂಡಿತು. ಅಧ್ಯಕ್ಷ ಸ್ಥಾನದಲ್ಲಿದ್ದ ಪುರಸಭಾಧ್ಯಕ್ಷರು, ಅಧಿಕಾರ ಸೂಚಕ ಮರದ ಕೊಡತಿಯಿಂದ ಮೇಜನ್ನು ಒಂದು ಬಾರಿ ಕುಟ್ಟಿ ಸಭೆಯನ್ನು ಪ್ರಾರಂಭಿಸಿದರು. ಅಂದಿನ ಸಭೆಯ ಕಾರ್ಯಸೂಚಿಯಲ್ಲಿ ಮೊದಲನೆಯ ವಿಷಯ ಭೂಮಿ ಪೂಜೆಗೆ ಸಂಬಂಧಿಸಿದ್ದಾಗಿತ್ತು. ನಿಯೋಜಿತ ಪುರಭವನದ ನಿರ್ಮಾಣಕಾರ್ಯವನ್ನು ಅಧಿಕೃತವಾಗಿ ಕೈಗೆತ್ತಿಕೊಳ್ಳುವ ಮೊದಲು ತಾಯಿ ಭೂದೇವಿಯ ಆಶೀರ್ವಾದವನ್ನು ಕೋರುವ ಪೂಜಾಕಾರ್ಯ ಅದಾಗಿತ್ತು. ಕಟ್ಟಡ ನಿರ್ಮಾಣ ಸಮಿತಿಯ ಅಧ್ಯಕ್ಷರೂ ಆಗಿದ್ದ ಪುರಸಭಾಧ್ಯಕ್ಷರು "ಸಭಾಸದರೇ, ನಾಳೆ ಬೆಳಗಿನ ೯-೦೦ ಗಂಟೆ ಬಹಳ ಪ್ರಶಸ್ತವಾದ ಮಹೂರ್ತವಾಗಿರುತ್ತದೆ. ಆದ್ದರಿಂದ ಪೂಜಾ ಕಾರ್ಯವು ಒಂಭತ್ತಕ್ಕೆ ಸರಿಯಾಗಿ ಪ್ರಾರಂಭವಾಗುವುದು. ಕಟ್ಟಡ ನಿರ್ಮಾಣ ಯೋಜನೆಗೆ ಅಗತ್ಯವಾಗಿ ಮಂಜೂರಾತಿಯನ್ನು ರಾಜ್ಯ ಸರಕಾರವು ಮೂರೇ ಮೂರು ದಿನಗಳ ಅವಧಿಯಲ್ಲಿ ನೀಡಿರುತ್ತದೆಯೆಂಬುದು ನಿಜಕ್ಕೂ ಒಂದು ದಾಖಲೆಯೇ ಸರಿ. ಪುರಸಭೆಯ ಕೃತಜ್ಞತೆಯ ಕರುಹಾಗಿ, ಹಾಗೂ ಬರುವ ದಿನಗಳಲ್ಲಿ ಒದಗಿ ಬರಬೇಕಾದ ಸಹಕಾರ, ಬೆಂಬಲಗಳು ಸಕಾಲದಲ್ಲಿ ದೊರೆಯಲು ದಾರಿಯಾಗಲಿ ಎಂಬ ಸದಭಿಪ್ರಾಯದಿಂದ ನಮ್ಮ ರಾಜ್ಯದ ಮುಖ್ಯಮಂತ್ರಿಯವರನ್ನು ಭೂಮಿಪೂಜಾ ಕಾರ್ಯಕ್ಕೆ ಆಹ್ವಾನಿಸಲಾಗಿದೆ. ಅವರು ಮುಕ್ತ ಮನಸ್ಸಿನಿಂದ ಒಪ್ಪಿದ್ದಾರೆ ಎಂದು ತಿಳಿಸಲು ಸಂತೋಷವಾಗುತ್ತದೆ. ಇನ್ನು ಶಿಷ್ಟಾಚಾರದ ರೀತ್ಯ, ಸ್ಥಾನೀಯ ಸಂಸ್ಥೆಗಳ ಸಚಿವರನ್ನೂ ಆಹ್ವಾನಿಸಲಾಗಿದೆ. ಅವರೂ ದಯಮಾಡಿಸುತ್ತಾರೆ" ಎಂಬ ವಿಷಯ ತಿಳಿದು ಪ್ರತಿಯೊಬ್ಬರೂ ಚಪ್ಪಾಳೆ ತಟ್ಟಿ ಮೆಚ್ಚುಗೆ ಸೂಚಿಸಿದರು.

ನಮ್ಮ ಸಭಾಸದರೂ ಸೇರಿದಂತೆ, ಎಲ್ಲಾ ಆಹ್ವಾನಿತರೂ ಆರಾಮವಾಗಿ ಕುಳಿತು ಉಪನ್ಯಾಸ ಕೇಳಬೇಕು, ಪೂಜಾ ಕಾರ್ಯವನ್ನು ನೋಡಬೇಕು. ಅದಕ್ಕೆ ಅನುವಾಗುವಂತೆ ಸೊಗಸಾದ ಶಾಮಿಯಾನ ಹಾಕಿಸಲಾಗುವುದು.

"ಭೂಮಿ ಪೂಜಾ ಕಾರ್ಯ ಮುಗಿದ ಮೇಲೆ, ಮಾನ್ಯ ಮುಖ್ಯಮಂತ್ರಿಯವರೂ ಮತ್ತು ಸ್ಥಾನೀಯ ಸಂಸ್ಥೆಗಳ ಸಚಿವರೂ ನಮ್ಮೆಲ್ಲ ಸದಸ್ಯರನ್ನೂ ಭೋಜನ ಕೂಟದಲ್ಲಿ ಭೇಟಿಯಾಗಲಿದ್ದಾರೆ".

"ಭೇಷ್, ಭೇಷ್!" ಸದಸ್ಯರು ತುಂಬು ಪ್ರಶಂಸೆಯನ್ನು ವ್ಯಕ್ತಪಡಿಸಿದರು. "ಸದಸ್ಯ ಮಿತ್ರರೆಲ್ಲರೂ, ನಾಳೆ ೮-೪೫ಕ್ಕೆ ಸರಿಯಾಗಿ ನಿವೇಶನದ ಹತ್ತಿರಕ್ಕೆ ಅಂದರೆ ಗಾಂಧೀ ಮೈದಾನಕ್ಕೆ ದಯಮಾಡಿಸಿರಿ, ಮುಖ್ಯಮಂತ್ರಿಯವರನ್ನು ಮತ್ತು ಸಂಬಂಧಪಟ್ಟ

ಮಂತ್ರಿಯವರನ್ನು ಸ್ವಾಗತಿಸಲು ಸಿದ್ಧರಾಗಿರಿ" ಎಂದು ವಿನಂತಿಸಿಕೊಳ್ತೇನೆ. ನಮ್ಮಲ್ಲಿ ಪ್ರತಿಯೊಬ್ಬರು ಮಲಾರ್ಪಣೆ ಮಾಡಲು ಅನುವಾಗುವಂತೆ, ಕೆಂಪು ಗುಲಾಬಿಯ ಒಂದೇ ರೀತಿಯ ೩೦ ಹಾರಗಳಿಗೆ ಈಗಾಗಲೇ ವ್ಯವಸ್ಥೆ ಮಾಡಲಾಗಿದೆ.

"ಈ ಎಲ್ಲ ವೆಚ್ಚವನ್ನೂ ಪುರಸಭೆಯೇ ವಹಿಸಿಕೊಳ್ಳುತ್ತದೆ. ಪ್ರಯುಕ್ತ ನೀವು ಯಾರೂ ವೈಯಕ್ತಿಕವಾಗಿ ಹಾರಗಳನ್ನು ತರಬೇಕಾಗಿಲ್ಲವೆಂದೂ ವಿನಂತಿಸಿಕೊಳ್ತೇನೆ. ಸ್ವಲ್ಪ ದೊಡ್ಡದಾದ ಹಾರ ಮತ್ತು ಪುಷ್ಪಗುಚ್ಛಗಳನ್ನು ಮುಖ್ಯಮಂತ್ರಿ ಮತ್ತು ಸಂಬಂಧಪಟ್ಟ ಮಂತ್ರಿಯವರಿಗೆ, ಪುರಸಭೆಯ ಪರವಾಗಿ ಮೊದಲು ನಾನು ಮಾಲಾರ್ಪಣೆ ಮಾಡ್ತೇನೆ. ಇದಕ್ಕೆ ಯಾರದ್ದೂ ಅಡ್ಡಿ ಇಲ್ಲ ಅಂತ ನಾನು ಭಾವಿಸ್ತೇನೆ!"

"ಇಲ್ಲ, ಖಂಡಿತ ಇಲ್ಲ! ಅಧ್ಯಕ್ಷರಿಗೆ ಪರಮಾಧಿಕಾರವಿದೆ" ಎಲ್ಲ ಸದಸ್ಯರಿಂದ ಒಮ್ಮತದ ಪ್ರತಿಕ್ರಿಯೆ ಹೊರಬಿತ್ತು.

"ಆಮೇಲೆ, ಈ ಸಭೆ ಒಂದಷ್ಟು ಹಣವನ್ನು ವೆಚ್ಚ ಮಾಡಲು ಅನುಮತಿ ನೀಡಿದರೆ – ಭಗವಾನ್ ಕೃಷ್ಣ, ಅರ್ಜುನನಿಗೆ ಗೀತೋಪದೇಶ ಮಾಡುತ್ತಿರುವ ಬೆಳ್ಳಿ ಫಲಕವನ್ನು ಮುಖ್ಯಮಂತ್ರಿಯವರಿಗೂ, ಸ್ವಲ್ಪ ಕಡಿಮೆ ಪ್ರಮಾಣದ ಅಂತಹುದನ್ನೇ ಸ್ಥಾನೀಯ ಸಂಸ್ಥೆಗಳ ಸಚಿವರಿಗೂ...

"ಸ್ವಾಮಿ ಅಧ್ಯಕ್ಷರೇ, ಈ ಪಟ್ಟಣ ಮತ್ತು ಪಟ್ಟಣಿಗರ ಹಿತಕ್ಕಾಗಿ ಸರಿ ಎನಿಸಿದ್ದನ್ನು ಮಾಡೋದಕ್ಕೆ ಅಧ್ಯಕ್ಷರಾದ ನಿಮಗೆ ಎಲ್ಲ ರೀತಿಯ ಹಕ್ಕಿದೆ, ಅವಕಾಶವೂ ಇದೆ" ಎಂದು ಹಿರೀ ಸದಸ್ಯರು ದೃಢಪಡಿಸಿದರು. ಅವರ ಆ ಅಭಿಪ್ರಾಯಕ್ಕೆ ಒಪ್ಪಿಗೆ ಸೂಚಿಸುವಂತೆ ಉಳಿದೆಲ್ಲ ಸದಸ್ಯರೂ ತಲೆದೂಗಿದರು.

"ಕೆಲಸ ಕೈಗೂಡಿದಂತಾಯಿತು, ನಮ್ಮೀ ಆತಿಥ್ಯ-ಸತ್ಕಾರಗಳಿಂದ ಮುಖ್ಯಮಂತ್ರಿ ಮತ್ತು ಸಂಬಂಧಪಟ್ಟ ಮಂತ್ರಿದ್ವಯರಿಗೆ ಮೆಚ್ಚುಗೆಯಾಗದಿರದು!" ಎಂದು ಅಧ್ಯಕ್ಷರು ಆನಂದಪಡಲಾರಂಭಿಸಿದ್ದರು.

ಅದೇ ಗುಂಗಿನಲ್ಲಿ ಅವರಿರುವಾಗ, ಕೊನೆಯ ಬೆಂಚಿನಿಂದ ಪರಿಚಿತ ಧ್ವನಿಯೊಂದು "ಸ್ವಾಮಿ, ಅಧ್ಯಕ್ಷರೇ, ಆ ಗಾಂಧೀ ಮೈದಾನದ ಬಗ್ಗೆ ವಿವರಗಳನ್ನು ತಿಳಿಯಲೆಂದು ನೀವು ಒಂದು ಸಮಿತಿಯನ್ನು ರಚಿಸಿದ್ದೀರಿ, ಸದರಿ ಸಮಿತಿ ಒಂದು ತಿಂಗಳಿನೊಳಗಾಗಿ ತನ್ನ ವರದಿಯನ್ನು ಸಲ್ಲಿಸಬೇಕಾಗಿತ್ತು. ಅದೀಗ ಯಾವ ಹಂತದಲ್ಲಿದೆ ಎಂಬುದನ್ನು ಸಭೆ ತಿಳಿಯಬಹುದೇ?"

ಅಧ್ಯಕ್ಷರು ಹಿರೀ ಸದಸ್ಯರತ್ತ ಪ್ರಶ್ನಾರ್ಹವಾಗಿ ನೋಡಿದರು. ಅವರು ತಕ್ಷಣವೇ ಎದ್ದು ನಿಂತು "ಅದನ್ನು ಕುರಿತು ಈವೊತ್ತೋ ವಿಚಾರ ಮಾಡ್ತೀರೇನು?" ಕೇಳಿದರು.

"ಏನಾಗಿದೆಯೆಂಬುದನ್ನು ಮಾನ್ಯ ಸದಸ್ಯರು ಸಭೆಯ ಗಮನಕ್ಕಾಗಿ ಸಂಕ್ಷೇಪಿಸಬಹುದು" ಎಂದು ಅಧ್ಯಕ್ಷರು ಅನುಮತಿ ನೀಡಿದರು.

"ಅದಾಗಬಹುದು!" ಎನ್ನುತ್ತ ತಲೆಬಾಗಿ ನಿಂತ ಸಮಿತಿಯ ಅಧ್ಯಕ್ಷರು ಸ್ವಲ್ಪ ಹೊತ್ತು ವಿಚಾರ ಮಾಡುವಂತಿದ್ದು ನಿಧಾನವಾಗಿ ತಲೆಯೆತ್ತಿ "ಸಮಿತಿಯ ಕಸರತ್ತು ನಿರರ್ಥಕ ಎಂದು ಕಂಡುಬರುತ್ತಿದೆ" ಎಂದರು.

"ಯಾಕೆ ನಿರರ್ಥಕ ಅಂತ ಕಂಡು ಬರ್ತಾಯಿದೆ ಅನ್ನೋದನ್ನ ಸ್ವಲ್ಪ ಬಿಡಿಸಿ

ಹೇಳೋದಕ್ಕೆ ಆಗಲ್ವೆ?" ಹಿಂಬೆಂಚಿನ ಸದಸ್ಯರು ತಮ್ಮ ಮಾಮೂಲಿ ಧಾಟಿಯಲ್ಲಿ ಒತ್ತಾಯಪಡಿಸಿದರು.

"ನಮ್ಮ ಸಮಿತಿಗೆ ಗ್ರಾಸವಾಗಿದ್ದ ಗಾಂಧೀ ಮಹಾಶಯ ಯಾರು? ಈ ಸ್ಥಳದ ಮೈದಾನಕ್ಕೆ ಅವರ ಹೆಸರು ಹೆಂಗ್ಬಂತು? ಅನ್ನೋದು ಯಾರೊಬ್ಬರ ತಲೆಯಲ್ಲೂ ಇದ್ದಂಗೆ ಕಂಡುಬರಲಿಲ್ಲ. ನಾವು ಅದಕ್ಕಾಗಿ ತಿರುಗಾಡಿದಾಗ ನಮಗೆ ಎದುರಿಗೆ ಸಿಕ್ಕಿದ ಯಾವ ಪ್ರಾಣಿಯನ್ನೂ ನಾವು ಬಿಡ್ಲಿಲ್ಲ. ಆದ್ರೂ ಪ್ರಯೋಜ್ನ ಕಾಣಲಿಲ್ಲ!" ಎಂದು ಖಚಿತವಾಗಿ ಹೇಳಿದರು.

"ಹಂಗಾದ್ರೆ ನಿಮ್ಮ ನಿರರ್ಥಕ ಕಸರತ್ತಿಗೆ ಖರ್ಚಾದ ಹಣವಾದ್ರೂ ಎಷ್ಟು ಅನ್ನೋದನ್ನ ತಿಳೀಬೋದು ತಾನೆ?" ಹಿಂಬೆಂಚಿನ ಸದಸ್ಯರು ಪ್ರಶ್ನಿಸಿದರು.

"ಆಗಿರೋ ಒಟ್ಟು ಖರ್ಚು ಹತ್ತು ಸಾವಿರದಿಂದಾಚೆಗೆ ಹೋಗಿಲ್ಲ, ವಿವರಗಳು ಬೇಕೂಂದ್ರೆ ತಿಳಿಸ್ತೀನಿ" ಹಿರೀ ಸದಸ್ಯರು ಅಷ್ಟೇ ಕಟುವಾಗಿ ಉತ್ತರಿಸಿದರು.

"ಹೌದಾ? ಬೇರೆ ಪಟ್ಟಣ-ನಗರಗಳಿಗೆ ವಿಮಾನದಲ್ಲಿ ಹೋಗಲಿಲ್ಲವೇನು?" ಹಿಂಬೆಚಿನ ಸದಸ್ಯರು ಮತ್ತೆ ಕೆದಕಿದರು.

"ಇಲ್ಲ, ಉದ್ದೇಶ ಸಫಲವಾಗಲ್ಲ ಅಂತ ಸಮಿತಿ ಅಭಿಪ್ರಾಯಪಟ್ಟದ್ರಿಂದ ಆ ಪ್ರಯತ್ನಕ್ಕೆ ಕೈ ಹಾಕಲಿಲ್ಲ. ಸ್ಥಳದಲ್ಲೇ ಯಾರೊಬ್ರಿಗೂ ವಿಷಯ ಗೊತ್ತಿಲ್ದೆ ಇರೋವಾಗ, ಹೊರಗಿನೋರ್ಗೆ ತಿಳಿದಿರುತ್ತೆ ಅಂತ ಅಂದ್ಕೋಳ್ಳೋದು ತಪ್ಪಾಗ್ತದೆ" ಹಿರೀ ಸದಸ್ಯರು ಕೆರಳಿದಂತೆ ಕಂಡುಬಂದರು.

"ಹಂಗಾದ್ರೆ, ಹೊರದೇಶಕ್ಕೂ ಹೋಗ್ಲಿಲ್ಲ ಅನ್ನಿ?" ಹಿಂಬೆಂಚಿನ ಸದಸ್ಯರ ಮಾತು ಕಚಗುಳಿಯಿಡುವಂತಿತ್ತು.

"ಅಂಥ ಯಾವ್ದೇ ಪ್ರವಾಸ ಮಾಡಿದ್ರೂ ಉದ್ದೇಶ ಈಡೇರಲ್ಲ ಅಂತ ಈಗಾಗ್ಲೇ ನಾನು ಹೇಳಿದ್ಮೇಲೂ ನೀವು ಕೇಳೋದ್ರಲ್ಲಿ ಅರ್ಥವಿಲ್ಲ!" ಹಿರೀ ಸದಸ್ಯರು ಎತ್ತರಿಸಿದ ಧ್ವನಿಯಲ್ಲಿ ಉತ್ತರಿಸಿದರು.

"ಒಳ್ಳೇದು. ಅರ್ಥವಾಯ್ತು! ಅಂತೂ ಈ ಮೈದಾನಕ್ಕೆ ಗಾಂಧೀ ಮೈದಾನ ಅಂತ ಯಾಕೆ ಹೆಸ್ರು ಬಂತು ಅನ್ನೋದನ್ನ ತಿಳಿಯೋ ಪುಣ್ಯ ನಮಗಿಲ್ಲ ತಾನೇ?" ಹಿಂಬೆಂಚಿನ ಸದಸ್ಯ ತನ್ನ ಮಾತನ್ನು ಪುನರುಚ್ಚರಿಸಿದರು.

ಅವರಿಬ್ಬರ ಮಧ್ಯೆ ಮಾತಿಗೆ ಮಾತು ಬೆಳೆಯುವಂತೆ ಕಂಡು ಬಂದುದುರಿಂದ, ಹತೋಟಿ ಮೀರುವ ಮೊದಲೇ ತಾನು ತಲೆ ಹಾಕುವುದು ಅಗತ್ಯವೆನಿಸಿತು. ಆದ್ದರಿಂದ ಸಭಾಧ್ಯಕ್ಷರು ಕೈಯಲ್ಲಿ ಕೊಡತಿಯನ್ನು ಹಿಡಿದು ಗಂಭೀರವಾಗಿ ಎದ್ದು ನಿಂತು "ಸ್ನೇಹಿತರೇ, ಇನ್ನು ಈ ವಿಷಯವನ್ನು ನಾವು ಚರ್ಚಿಸುವುದು ಬೇಡ, ಏಕೆಂದರೆ ಸಮಿತಿ ಈಗಾಗಲೇ ತನ್ನ ವರದಿಯನ್ನು ಕಾರ್ಯಾಲಯಕ್ಕೆ ಸಲ್ಲಿಸಿದೆ. ಸದರಿ ವರದಿಯಲ್ಲಿ, ಗಾಂಧೀ ಬಗ್ಗೆಯಾಗಲಿ, ಅಥವಾ ಈ ಸ್ಥಳದ ಮೈದಾನಕ್ಕೆ ಅವರ ಹೆಸರು ಹೇಗೆ ಬಂದಿತೆಂಬುದರ ಬಗೆಗಾಗಲಿ ತಲೆ-ಬಾಲ ತಿಳಿದು ಬರುತ್ತಿಲ್ಲವೆಂದು ತಿಳಿಸಲಾಗಿದೆ. ಅದೇ ಹಿನ್ನೆಲೆಯಲ್ಲಿ ಸಮಿತಿಯನ್ನು ವಿಸರ್ಜಿಸಬೇಕೆಂದೂ ಕೋರಿದೆ. ಈ ಸಭೆ ಆ ಕೋರಿಕೆಯನ್ನು ಒಪ್ಪುವುದಾದರೆ, ನಾನು ಒಂದು ಬೇರೆ ಸಲಹೆಯನ್ನು ಸಭೆಯ ಮುಂದಿಡಬಯಸ್ತೇನೆ" ಎಂದು ಹೇಳಿ ಸುಮ್ಮನಾದರು.

"ನಾನು ಈಗಾಗ್ಲೆ ಹೇಳಿದ್ದಂಗೆ, ಹೇಳಬೇಕಾದ್ದನ್ನು ಹೇಳೋದಕ್ಕೆ ಅಧ್ಯಕ್ಷರಿಗೆ ಹಕ್ಕೂ ಇದೆ. ಅವಕಾಶವೂ ಇದೆ. ಆದ್ರಿಂದ ಹೇಳಿ!" ಹಿರೀ ಸದಸ್ಯರು ಕೇಳಿಕೊಂಡರು. "ಹೌದು, ಹೌದು!" ಉಳಿದವರೆಲ್ಲರೂ ಒಟ್ಟಾಗಿ ಗಟ್ಟಿಯಾಗಿ ಒಪ್ಪಿಗೆ ಸೂಚಿಸಿದರು. "ಅದೇನು ಅನ್ನೋದನ್ನ ಅಧ್ಯಕ್ಷರು ತಿಳಿಸುವುದಾಗಲಿ!" ಹಿಂಬೆಂಚಿನ ಸದಸ್ಯರು ವಿನಂತಿಸಿಕೊಂಡರು.

"ವರ್ತಮಾನದಲ್ಲಿ ನಮಗೆ ಲಭ್ಯವಾಗಿರುವ ವರದಿ ಪ್ರಕಾರ, ಗಾಂಧೀ ಮತ್ತು ಗಾಂಧೀ ಮೈದಾನಗಳ ಹಿನ್ನೆಲೆ ಏನೂಂತ ಯಾರಿಗೂ ತಿಳಿದಿಲ್ಲ. ಬಹುಶಃ ಕಳೆದು ಹೋಗಿರುವ ಕಾಲದ ಕತ್ತಲೆಯಲ್ಲಿ ಅದೂ ಕಣ್ಮರೆಯಾಗಿದೆ ಅಂತ ಕಾಣ್ತದೆ. ಆದ್ದರಿಂದ ಮೈದಾನವನ್ನು "ಪುರಸಭಾ ಮೈದಾನ" ಅಂತ ಮರು ನಾಮಕರಣ ಮಾಡುವುದು ಸೂಕ್ತ ಅಂತ ನನ್ನ ಅಭಿಪ್ರಾಯ, ಅದೇ ನನ್ನ ಸಲಹೆಯೂ ಹೌದು". ಅಧ್ಯಕ್ಷರು ಮುಗುಳ್ನಗುತ್ತ ಹೇಳಿದರು.

"ಪುರಸಭಾ ಮೈದಾನ ಅನ್ನೋದ್ರಲಲ್ಲಿ ಏನ್ ವಿಶೇಷ ಐತೆ ಸ್ವಾಮಿ?" ತೀಕ್ಷ್ಣವಾಗಿ ಪ್ರತಿಕ್ರಿಯೆ ವ್ಯಕ್ತಪಡಿಸಲಾರಂಭಿಸಿದ ಹಿಂಬೆಂಚಿನ ಸದಸ್ಯರು "ಅದು ಮುನಿಸಿಪಲ್ ಸೊತ್ತಾದ್ದರಿಂದ, ನೀವು ಹೆಸರಿಡದಿದ್ರೂ ಅದು "ಮುನಿಸಿಪಲ್ ಮೈದಾನವೇ!" ಹಂಗೆ ಕರೆಯೋದಕ್ಕಿಂತ, ಮೈದಾನಕ್ಕೆ ವಿಖ್ಯಾತ ಅಥವಾ ಮಹಾನ್ ವ್ಯಕ್ತಿಯೊಬ್ಬರ ಹೆಸ್ರನ್ನ ಇರಿಸೋದು ಸೂಕ್ತ ಅಂತ..."

"ಹೌದು, ಇದನ್ನ ನಾನೂ ಒಪ್ತೀನಿ! ಈ ಸಭೆ ತಪ್ಪಾಗಿ ಭಾವಿಸುವುದಿಲ್ಲವಾದ್ರೆ, ನನ್ನ ಒಂದು ವಿನಮ್ರ ಸಲಹೆಯನ್ನ ಸಭೆಯ ಮುಂದಿಡಬಯಸ್ತೇನೆ" ಹಿರೀ ಸದಸ್ಯರು ಸನ್ನಿವೇಶವನ್ನು ಬಳಸಿಕೊಳ್ಳಲೆತ್ನಿಸಿದರು.

"ಅದು ಏನು ಅನ್ನೋದನ್ನ ದಯವಿಟ್ಟು ತಿಳಿಸಿ!" ಅಧ್ಯಕ್ಷರು ಅನುಮತಿಸಿದರು. ಈ ಸಲಹೆಯನ್ನ ಸಭೆಯ ಮುಂದಿಡೋದ್ರಲ್ಲಿ ನನ್ನ ಸ್ವಾರ್ಥವೇನೂ ಇಲ್ಲ ಅನ್ನೋದನ್ನ ಈ ಸಭೆ ಗಮನಿಸಬೇಕು. ಒಂದ್ವೇಳೆ, ನನ್ನ ಸಲಹೆ ಅಥವಾ ಹೇಳಿಕೆ ಮೂರ್ಖತನದ್ದು ಅಂತ ಕಂಡ್ಬಂದ್ರೆ ಸಭೆ ದಯವಿಟ್ಟು ಕ್ಷಮಿಸ್ಬೇಕು" ಎಂದು ಹಿರೀ ಸದಸ್ಯರು ಕೋರಿದರು.

"ನೋಡಿ, ನಾವಿಲ್ಲಿ ಕೆಲಸ ಮಾಡ್ತಿರೋದೇ ಪ್ರಜಾಪ್ರಭುತ್ವದ ರೀತ್ಯ ಅಂದಾಗ, ನಿಮ್ಮ ಅಭಿಪ್ರಾಯ, ಸಲಹೆಗಳಿಗೆ ಅವಕಾಶ ಖಂಡಿತ ಇದೆ. ಆದ್ದರಿಂದ ದಯವಿಟ್ಟು ನಿಮ್ಮ ಸಲಹೆಯನ್ನು ತಿಳಿಸಿ" ಅಧ್ಯಕ್ಷರು ಒತ್ತಾಯಪಡಿಸಿದರು.

"ಸಂತೋಷ, ನಾನೀಗ ನೀಡಬಯಸೋ ಸಲಹೇನೂ ಸರಳವಾಗಿದೆ. ತಮಗೆಲ್ಲರಿಗೂ ತಿಳಿದಿರೋ ಹಾಗೆ ನಾನು ಈ ಪುರಸಭೆಯ ಸದಸ್ಯನಾಗಿ ಕಳೆದ ೨೫ ವರ್ಷಗಳಿಂದ ಸೇವೆ ಮಾಡ್ತಾ ಬಂದಿದ್ದೀನಿ. ಶ್ರದ್ಧೆಯಿಂದ ಮಾಡಿದ್ದೀನಿ, ನಿಷ್ಠೆಯಿಂದ ಮಾಡಿದ್ದೀನಿ ಅಂತ ಹೇಳಬೇಕಾದ್ದೇ ಇಲ್ಲ. ನನ್ನ ಪೂಜ್ಯ ತಂದೆಯವ್ರು ತಮಗೆಲ್ಲ ತಿಳಿದಿರೋ ಹಂಗೆ ನಮ್ಮ ಟೌನಿನಲ್ಲಿ ಸಮಾಜ ಕಾರ್ಯಕರ್ತರಾಗಿದ್ರು. ಆದ್ದರಿಂದ ನನ್ನ ಸಲಹೆ ಏನೂಂತಂದ್ರೆ..." ಹಿರೀ ಸದಸ್ಯರು ತಮ್ಮ ಅಭಿಪ್ರಾಯವನ್ನು ಹೇಳಲಾರಂಭಿಸಿದರು.

"ನೀವು ಏನ್ಹೇಳಲಿಕ್ಕೆ ಹೊರಟಿದ್ದೀರಿ? ಮೈದಾನಕ್ಕೆ ನಿಮ್ಮಪ್ಪನ

ಹೆಸರಿಡಬೇಕೂಂತ ತಾನೆ ನಿಮ್ಮ ಸರಳವಾದ ಸಲಹೆ? ಬೇಡ, ತರಾತುರಿಯಲ್ಲಿ ಹೆಸ್ರನ್ನ ಬದ್ಲಾಯಿಸೋ ಅಗತ್ಯವೂ ಇಲ್ಲ, ಬೇಡವೂ ಬೇಡ. ನಾಳೆ ಆಗಬೇಕಾದ ಕಾರ್ಯಕ್ರಮ ಮುಗೀಲಿ. ಆಮೇಲೆ ಒಂದು ದಿನ ಬಿಡುವಾಗಿ ಕುಳಿತ್ಕೊಂಡು ನಿಧಾನವಾಗಿ ಚರ್ಚಿಸಿದರಾಯ್ತು" ಎಂದು ಹಿಂಬೆಂಚಿನ ಸದಸ್ಯರು ಮುಳ್ಳು ಮುರಿದು ಮಾತಾಡಿದರು.

"ಬಹಳ ಬಹಳ ಸಮಯೋಚಿತವಾದ ಸಲಹೆ!" ಎಂದು ಹೃತ್ಪೂರ್ವಕವಾಗಿ ಪ್ರಶಂಸಿಸಿದ ಅಧ್ಯಕ್ಷರು "ಮಿತ್ರರು ಹೇಳಿದ ಹಾಗೆ, ನಾಳಿನ ಕಾರ್ಯಕ್ರಮದ ಬಗ್ಗೆ ನಾವೆಲ್ಲ ಗಮನ ಹರಿಸಿ ಅದನ್ನ ಯಶಸ್ವಿಯಾಗಿ ಮುಗಿಸಿಬಿಡೋಣ. ಹಾಗೆಯೇ ಮೈದಾನಕ್ಕೆ ಮರು ನಾಮಕರಣ ಮಾಡುವ ವಿಚಾರದಲ್ಲಿ, ವಿಶೇಷವಾಗಿ ನಮ್ಮ ಹಿರೀ ಸದಸ್ಯರ ತಂದೆ ಹೆಸ್ರನ್ನ ಇರಿಸೋ ಬಗೆಗೂ ಸದಸ್ಯರು ಯೋಚನೆ ಮಾಡಬೇಕೂಂತ ನನ್ನ ಸಲಹೆ, ಯಾಕೆ ಅಂತಂದ್ರೆ "ಕಣ್ಣಿಗೆ ಕಾಣದಿರೋ ದೇವರಿಗಿಂತ, ಕಣ್ಣಂಚಿನಲ್ಲಿರೋ ದೆವ್ವ ಮೇಲು ಅನ್ನೋ ಲೋಕಾಭಿಪ್ರಾಯ ತಮ್ಗೂ ತಿಳಿದಿದೆ..."

ಇದನ್ನ ಕೇಳಿ, ಕೆಂಡಮಂಡಲವಾದ ಹಿರೀ ಸದಸ್ಯರು "ರೀ ಅಧ್ಯಕ್ಷರೇ ನಿಮ್ಮೀ ಹೇಳಿಕೆಯನ್ನ ನಾನು ವಿರೋಧಿಸ್ತೇನೆ. ನಮ್ಮ ತಂದೆ ಕಣ್ಣಂಚಿನಲ್ಲಿರೋ ದೆವ್ವ, ಆ ಗಾಂಧೀ ಕಾಣದಿರೋ ದೇವ್ರು ಅಂತ ತಾನೆ ನಿಮ್ಮ ಅಭಿಪ್ರಾಯ? ನಿಮ್ಮ ಈ ಹೋಲಿಕೆಯನ್ನು ನಾನು ತೀವ್ರವಾಗಿ ಆಕ್ಷೇಪಿಸ್ತೇನೆ, ಪ್ರತಿಭಟಿಸ್ತೇನೆ!" ಎಂದು ಕಿಡಿ ಕಾರಿದರು.

ನಿಮ್ಮಪ್ಪ ದೆವ್ವ-ಕಣ್ಣಂಚಿನಲ್ಲಿರೋ ದೆವ್ವ ಅಂತ ಯಾರೂ ಹೇಳಲಿಲ್ಲ. ಅಧ್ಯಕ್ಷರೂ ಹೇಳಲಿಲ್ಲ. ಲೋಕಾರೂಢಿಯಾಗಿ ಇರೋ ಹೇಳಿಕೆಯನ್ನು ಮಾತ್ರ ಅಧ್ಯಕ್ಷರು ಯಥಾವತ್ತಾಗಿ ಹೇಳಿದ್ದಾರೆ. ಆ ಹೇಳಿಕೆ ಅವರ ಸ್ವಂತ ಸೃಷ್ಟಿ ಅಲ್ಲ!" ಎಂದು ಹಿಂಬೆಂಚಿನ ಸದಸ್ಯರು ಅಷ್ಟೇ ಹರಿತವಾಗಿ ಪ್ರತಿಯಾಡಿದರು.

"ಅದು ಏನೇ ಇರ್ಲಿ, ಇದನ್ನ ನಾನು ಅತ್ಯುಗ್ರವಾಗಿ ಪ್ರತಿಭಟಿಸ್ತೇನೆ" ಎಂದು ಹೇಳಿದ ಹಿರೀ ಸದಸ್ಯರು ಬಹಳ ನೊಂದಂತೆ ಕಂಡುಬಂದರು.

"ನಾನು ಬಳಸಿದ್ದು ಅವಾಚ್ಯವೇನಲ್ಲ!" ಅಧ್ಯಕ್ಷರು ಸಮರ್ಥಿಸಿಕೊಂಡರು. ನೋಡ್ರೀ, ಅದು ವಾಚ್ಯವೋ, ಅವಾಚ್ಯವೋ ಅದು ನನಗೆ ಬೇಕಾಗಿಲ್ಲ. ಇದಕ್ಕೆ ಪ್ರತಿಭಟನೆ ಸೂಚಕವಾಗಿ, ನಾನು ನಾಳಿನ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲ್ಲ" ಎಂದು ಹೇಳುತ್ತ ಅವರು ಸಭೆಯಿಂದ ಹೊರಬಿದ್ದರು. ಅವರ ಈ ವರ್ತನೆ ಪ್ರತಿಯೊಬ್ಬರಿಗೂ ವಿಸ್ಮಯವನ್ನುಂಟುಮಾಡಿತು.

(ಮುಂದುವರಿಯುವುದು...)

* * *

ಜನಪದ ಸೇವಾ ಟ್ರಸ್ಟ್ ಸಮಾಚಾರ


ಟ್ರಸ್ಟಿನ ಲೆಕ್ಕ ಪತ್ರಗಳನ್ನು ಕಂಪ್ಯೂಟರೀಕರಣಗೊಳಿಸಲಾಗುತ್ತಿದೆ. ಕರುಣಾಗೃಹದ ಮಕ್ಕಳಿಗೆ ಮನೆಪಾಠ ಹೇಳಲು ಓರ್ವ ಅಧ್ಯಾಪಕರನ್ನು ಗೊತ್ತು ಮಾಡಲಾಗಿದೆ. ಸ್ಮೃತಿ ವಾಟಿಕಾ ಎಂಬ ಹೆಸರಿನಲ್ಲಿ ಕಾಡು ಮರಗಳನ್ನು ಬೆಳೆಸುವ ಅಂಗವಾಗಿ ಮೇಲುಕೋಟೆ ಸುತ್ತಮುತ್ತಲಿನ ಪ್ರದೇಶದಲ್ಲಿರುವ ವಿವಿಧ ಜಾತಿಯ ಮರಗಳ ಬೀಜವನ್ನು ಸಂಗ್ರಹಿಸುವ ಪ್ರಯತ್ನ ಮಾಡಲಾಗುತ್ತಿದೆ. ಈ ಕೆಲಸದಲ್ಲಿ ಮರಗಳ ಬಗ್ಗೆ ಅಪಾರವಾದ ಪ್ರೀತಿಯನ್ನು ಬೆಳೆಸಿಕೊಂಡಿರುವ ಸಾಫ್ಟ್‌ವೇರ್ ಇಂಜಿನಿಯರ್‌ಗಳಾದ ಮುರಳಿ ಮತ್ತು ಸುಬ್ರಮಣ್ಯ ಎಂಬ ಯುವಕರು ನೆರವಾಗಿದ್ದಾರೆ. ಟ್ರಸ್ಟಿನ ಕಾರ್ಯಕಾರಿ ಸಮಿತಿ ಸಭೆ ನಡೆಯಿತು. ಈ ಸಭೆಯಲ್ಲಿ ಲೆಕ್ಕ ಪತ್ರಗಳ ಅಂಗೀಕಾರ ಕಾರ್ಯವರದಿ ಪರೀಶೀಲನೆ ಇತ್ಯಾದಿ ಕಲಾಪಗಳು ನಡೆದವು. ಇತ್ತೀಚಿಗೆ ಮದ್ದೂರಿನಲ್ಲಿ ನಡೆದ ಅಂತರ್‌ಕಾಲೇಜು ರಾಷ್ಟ್ರೀಯ ಸೇವಾ ಯೋಜನೆಯ ಶಿಬಿರದಲ್ಲಿ ಹಾಗೂ ಪಶ್ಚಿಮವಾಹಿನಿಯಲ್ಲಿ ನಡೆದ ಸರ್ವೋದಯ ಮೇಳದಲ್ಲಿ ನಡೆದ ಕಾರ್ಯಕ್ರಮದಲ್ಲಿ ಟ್ರಸ್ಟಿನ ಅಧ್ಯಕ್ಷರು ಭಾಗವಹಿಸಿದ್ದರು. ಆ ಸಂದರ್ಭದಲ್ಲಿ ಗಾಂಧೀ ಸಾಹಿತ್ಯ ಮತ್ತು ಖಾದಿ ಬಟ್ಟೆ ಮಾರಾಟ ಮಾಡಲಾಯಿತು. ಬಿ.ಟಿ.ಬದನೆಕಾಯಿಯ ವಿರುದ್ಧ ನಡೆದ ವೈಚಾರಿಕ ಶಿಬಿರಗಳಲ್ಲಿ ಸಂತೋಷ ಕೌಲಗಿಯವರು ಭಾಗವಹಿಸಿದರಲ್ಲದೆ ಪತ್ರಿಕೆಗಳಿಗೆ ಲೇಖನವನ್ನು ಬರೆದರು. ಬೆಂಗಳೂರಿನ ಮಲ್ಲೇಶ್ವರಂ ಮಹಿಳಾ ಸಂಘದ ಕಾಲೇಜಿನ ಸುಮಾರು ನಲವತ್ತು ವಿದ್ಯಾರ್ಥಿನಿಯರು ಟ್ರಸ್ಟಿಗೆ ಭೇಟಿಕೊಟ್ಟರು. ಕರುಣಾಗೃಹದ ಮಕ್ಕಳ ಬಿಸಿನೀರಿನ ವ್ಯವಸ್ಥೆಯಲ್ಲಿ ರಮೇಶ ಕಿಕ್ಕೇರಿಯವರು ಸುಧಾರಣೆ ಮಾಡಿಕೊಟ್ಟರು. ಬೆಂಗಳೂರಿನ ಕರ್ನಾಟಕ ಸರ್ವೋದಯ ಸಂಘದ ಅಧ್ಯಕ್ಷರಾದ ಶ್ರೀ ರಾಮಣ್ಣ ಮತ್ತು ಕಾರ್ಯದರ್ಶಿಯವರಾದ ಶ್ರೀ ಶೇಷಾಚಾರ್ಯ ಟ್ರಸ್ಟಿನ ಖಾದಿ ಚಟುವಟಿಕೆಗಳ ಕೇಂದ್ರಕ್ಕೆ ಭೇಟಿ ಕೊಟ್ಟರು. ತಮ್ಮ ಸಂಘದ ಖಾದಿ ಕೆಲಸದಲ್ಲಿ ಟ್ರಸ್ಟಿನ ಖಾದಿ ಚಟುವಟಿಕೆಗಳನ್ನು ಸಮನ್ವಯಗೊಳಿಸಿಕೊಳ್ಳುವುದಾಗಿ ಭರವಸೆ ಕೊಟ್ಟರು.

೨೦೧೦ ಫೆಬ್ರವರಿ ಮಾಹೆಯ ದಾನಿಗಳು

ಶ್ರೀ ಎಸ್.ನಾಗಭೂಷಣ್; ಶ್ರೀ ಟಿ.ಆರ್.ಗಾಯಕವಾಡ್; ಶ್ರೀಮತಿ ಮಾಲತಿ ಸಿದ್ದನೂರು; ಶ್ರೀ ನರಸಿಂಹರಾವ್ ಮತ್ತು ಪರಿಮಳಾಮೂರ್ತಿ; ಶ್ರೀಮತಿ ಸರಸ್ವತಿ ರಂಗಸ್ವಾಮಿ; ಶ್ರೀ ಎಚ್.ಎನ್.ವೆಂಕಟೇಶ್; ಶ್ರೀಮತಿ ಜಯಲಕ್ಷ್ಮಿ ಹಂದೆ; ಶ್ರೀ ಆರ್.ಆರ್.ಅನವಟ್ಟಿ; ಡಾ.ಪ್ರೀತಿ ವೈರಾಂ ಮೋಹನ್; ಶ್ರೀಮತಿ ಅರ್ಚನಾ; ಶ್ರೀಮತಿ ಶಶಿಪ್ರಭ ಅಪ್ರಮೇಯ – ಬೆಂಗಳೂರು ಡಾ.ಸಿ.ಪಿ.ಕೃಷ್ಣಕುಮಾರ್; ಶ್ರೀ ಯು.ಎನ್.ರವಿಕುಮಾರ್; ಶ್ರೀ ರಾಜೀವ್; ಶ್ರೀಮತಿ ಕ್ಷಮಾ ಕತ್ವಾರ್ – ಮೈಸೂರು; ಅಭಿನವ ಭಾರತಿ ವಿದ್ಯಾರ್ಥಿಗಳು – ಮಂಡ್ಯ; ಶ್ರೀಮತಿ ಎಂ.ಎಸ್. ಮಮತಾ – ಹರಿಹರ; ಶ್ರೀ ಕೆ.ಆರ್.ನಂಜುಂಡನ್ – ಕೊಯಮತ್ತೂರು ಮತ್ತು ಸಂಸ್ಥೆಯ ಎಲ್ಲ ಮಾಹೆಯಾನ ದಾನಿಗಳಿಗೆ ಟ್ರಸ್ಟ್ ತನ್ನ ಕೃತಜ್ಞತೆಯನ್ನು ಸಮರ್ಪಿಸುತ್ತದೆ.

ಜನಪದ ನಿಲಯದ ಅಂತರಂಗದಲ್ಲಿ .. ೨೬

- ಸುರೇಂದ್ರ ಕೌಲಗಿ



ಜನಪದ ಸೇವಾ ಟ್ರಸ್ಟ್ ಪ್ರಾರಂಭವಾದಾಗಿನಿಂದಲೂ ಟ್ರಸ್ಟಿನ ಅಭಿಮಾನಿಗಳು, ಸ್ನೇಹಿತರು ಮತ್ತು ದಾನಿಗಳು ತಮ್ಮತಮಗೆ ಅನುಕೂಲವಾದ ದಿನ ಮತ್ತು ಸಮಯದಂದು ತಿಳಿಸಿಯೋ ತಿಳಿಸದೆಯೋ ಬರುವ ಪದ್ಧತಿ ಜಾರಿಯಲ್ಲಿದೆ. ಪ್ರಾರಂಭದಲ್ಲಿ ಟ್ರಸ್ಟಿಗೆ ಭೇಟಿ ಕೊಡುವವರ ಹೆಸರನ್ನು ಮತ್ತು ಅವರು ಬಂದು ಹೋದ ಉದ್ದೇಶ ಹಾಗೂ ಅವರಿಗೆ ಮಾಡಲಾದ ಆತಿಥ್ಯದ ರೀತಿಯನ್ನು ಒಂದು ಪುಸ್ತಕದಲ್ಲಿ ದಾಖಲೆಯಾಗಿ ಮಾಡುವ ಯೋಚನೆ ಬಂದಿತು. ಅದರಂತೆ ಕೆಲವು ತಿಂಗಳಕಾಲ ಆ ವಿಚಾರವನ್ನು ಅನುಸರಿಸಲು ಪ್ರಯತ್ನವನ್ನೂ ಮಾಡಲಾಯಿತು. ಆದರೆ ಕ್ರಮೇಣ ಅದು ಕಷ್ಟ ಸಾಧ್ಯವೆಂದು ಮತ್ತು ಅಗತ್ಯವಿಲ್ಲವೆಂದು ತಿಳಿದು ಕೈಬಿಡಲಾಯಿತು. ಇನ್ನು ಇದಕ್ಕೆ ಪರ್ಯಾಯವಾಗಿ ಸಂದರ್ಶಕರ ಪುಸ್ತಕವನ್ನು ಇಡಬಹುದೆಂದು ಅನಿಸಿತು. ಈ ಅನಿಸಿಕೆಯನ್ನೂ ಜಾರಿಗೆ ತರಲಾಯಿತು. ಕೆಲವು ತಿಂಗಳ ನಂತರ ಸಂದರ್ಶಕರ ಪುಸ್ತಕವನ್ನು ಓದಿ ನೋಡಲಾಗಿ ಅದರಲ್ಲಿ ಇದ್ದದ್ದು ಪ್ರಶಂಸೆಯ ಮಳೆ! ನಾವೇ ಪುಸ್ತಕ ಕೊಟ್ಟು ನಮ್ಮ ಬಗ್ಗೆಯೇ ಪ್ರಶಂಸೆ ಪಡೆಯುವುದು ಮುಜುಗರವೆನಿಸಿತು. ಆದ್ದರಿಂದ ಅದನ್ನೂ ಕೈಬಿಡಲಾಯಿತು. ಈಗ ಕೇವಲ ದಿನಚರಿಯಲ್ಲಿ ಮಾತ್ರ ಮುಖ್ಯವಾದುದನ್ನು ನಮೂದಿಸುವ ವ್ಯವಸ್ಥೆ ಜಾರಿಗೊಳಿಸಲಾಗಿದೆ. ಆದರೆ ಅದೂ ಕೂಡ ಅನೇಕ ಬಾರಿ ತಪ್ಪಿ ಹೋಗುವುದುಂಟು. ಈ ವಿಷಯ ಏನೇ ಇರಲಿ, ಒಂದು ಮಾತು ಮಾತ್ರ ಬಹು ಮುಖ್ಯವಾಗಿ ಅನುಭವಕ್ಕೆ ಬಂದಿದೆ. ಟ್ರಸ್ಟಿಗೆ ಭೇಟಿ ಕೊಟ್ಟ ಅನೇಕರು ತಮ್ಮ ಭೇಟಿಯ ಸಂದರ್ಭವನ್ನು, ನೋಡಿದ ಚಟುವಟಿಕೆಗಳನ್ನು ಹಾಗೂ ಆತಿಥ್ಯವನ್ನು ಎಷ್ಟೋ ವರ್ಷಗಳ ನಂತರವೂ ಮರೆಯದೆ ಜ್ಞಾಪಕದಲ್ಲಿ ಇಟ್ಟುಕೊಂಡಿರುತ್ತಾರೆ. ಅಕಸ್ಮಾತ್ತಾಗಿ ಅವರ ಭೇಟಿ ಬೇರೆ ಸಂದರ್ಭದಲ್ಲಿ ಆದಾಗ ಅವರು ತುಂಬ ಸಂತೋಷದಿಂದ ಮಾತನಾಡಿಸುತ್ತಾರೆ. ತಾವು ಟ್ರಸ್ಟಿಗೆ ಭೇಟಿ ಕೊಟ್ಟಿದ್ದನ್ನು ಜ್ಞಾಪಿಸುತ್ತಾರೆ. ಕೊನೆಯಲ್ಲಿ ಒಂದು ಮಾತನ್ನು ಹೇಳುವುದನ್ನು ಮರೆಯುವುದಿಲ್ಲ. ತಾವು ಟ್ರಸ್ಟಿಗೆ ಬಂದಿದ್ದಾಗ ಮಾಡಿದ ಊಟದ ರುಚಿಯನ್ನು. ಅನೇಕ ಸಂದರ್ಭದಲ್ಲಿ ಅವರ ಭೇಟಿಯಾದಾಗ ಮೊಟ್ಟ ಮೊದಲು ಅವರು ಜ್ಞಾಪಿಸಿಕೊಂಡು ಹೇಳುವುದು ತಾವು ಊಟ ಮಾಡಿದ್ದ ಈರುಳ್ಳಿ ಬದನೆಕಾಯಿ ಹುಳಿಯನ್ನು, ಅವರೆಕಾಳು ಉಪ್ಪಿಟ್ಟನ್ನು ಇತ್ಯಾದಿ. ಇದಕ್ಕೆಲ್ಲ ಕಾರಣ ಗಿರಿಜಮ್ಮನವರ ಅಡುಗೆ ಮಾಡುವ ವಿಧಾನ ಮತ್ತು ಅವರ ಅಡುಗೆ ರುಚಿಯನ್ನು ಸವಿದದ್ದು. ಟ್ರಸ್ಟಿನ ಜನಾಧಾರಿತ ಬೆಳವಣಿಗೆಯಲ್ಲಿ ಗಿರಿಜಮ್ಮನವರ

ಅಡುಗೆಯ ಪಾತ್ರ ಬಹುದೊಡ್ಡದಾಗಿದೆ. ಅದನ್ನು ಕಣ್ಣಿನಿಂದ ಗ್ರಹಿಸುವುದಕ್ಕಾಗಲೀ ಅಥವಾ ಲೆಕ್ಕ ಪತ್ರದ ಮೂಲಕ ಅಳೆಯುವುದಕ್ಕಾಗಲೀ ಸಾಧ್ಯವಿಲ್ಲ. ಟ್ರಸ್ಟ್ ಜನಾಧಾರಿತವಾಗಿ ಬೆಳೆದು ಬಂದಿರುವುದಕ್ಕೆ ಗಿರಿಜಮ್ಮನವರ ಅಡುಗೆಯ ಚಾಕಚಾಕ್ಯತೆ ಬಹಳಷ್ಟು ಕಾರಣವಾಗಿದೆ ಎಂದು ಹೇಳಿದರೆ ಅತಿಶಯೋಕ್ತಿ ಆಗಲಾರದು, ಅಸತ್ಯವೂ ಆಗಲಾರದು. ಅವರ ಅಡುಗೆಯ ರುಚಿಯ ವ್ಯಾಪ್ತಿ ಹೊರದೇಶಕ್ಕೂ ಹಬ್ಬಿದೆ ಎಂದರೆ ಸಾಮಾನ್ಯವಾಗಿ ಯಾರು ನಂಬಲಾರರು. ಆದರೆ ಬೇರೆ ಬೇರೆ ಸಂದರ್ಭಗಳಲ್ಲಿ ಬೇರೆ ಬೇರೆ ಕಾರಣಗಳಿಂದ ಬಂದು ಹೋದ ವಿದೇಶಿ ಸ್ವಯಂ ಸೇವಕರು ತಾವು ಬರೆಯುವ ಕಾಗದದಲ್ಲಿ ಗಿರಿಜಮ್ಮನವರ ಅಡುಗೆಯ ಸ್ವಾದವನ್ನು ನೆನಪಿಸಿಕೊಳ್ಳದೆ ತಮ್ಮ ಪತ್ರದ ಒಕ್ಕಣೆಯನ್ನು ಮುಗಿಸುವುದಿಲ್ಲ. ಟ್ರಸ್ಟಿನ ಅಂಗವಾದ ಕರುಣಾಗೃಹ ಪ್ರಾರಂಭವಾಗಿ ನಲವತ್ತೇಳು ವರ್ಷಗಳಾದವು. ಈ ನಲವತ್ತೇಳು ವರ್ಷಗಳಲ್ಲಿ ಕರುಣಾಗೃಹದಲ್ಲಿ ಇದ್ದು ವ್ಯಾಸಂಗ ಮಾಡಿ ಹೋದ ಮಕ್ಕಳ ಸಂಖ್ಯೆ ದೊಡ್ಡದಾಗಿದೆ. ಆ ಮಕ್ಕಳು ಕರುಣಾಗೃಹದಲ್ಲಿ ೨, ೩ ವರ್ಷದಿಂದ ೫, ೬ ವರ್ಷದ ವರೆಗೆ ಇದ್ದು ವ್ಯಾಸಂಗ ಮಾಡಿ ಹೋಗಿದ್ದಾರೆ. ಈ ದೀರ್ಘಾವಧಿಯಲ್ಲಿ ಇಷ್ಟೊಂದು ಮಕ್ಕಳಲ್ಲಿ ಯಾವೊಂದು ಮಗುವೂ ಯಾವುದೇ ಕಾಯಿಲೆಯಿಂದ ಬಳಲಿದ ಉದಾಹರಣೆಯಿಲ್ಲ. ಕರುಣಾಗೃಹದಲ್ಲಿ ಇದ್ದ ಎಲ್ಲ ಮಕ್ಕಳು ಪರಿಪೂರ್ಣವಾಗಿ ಆರೋಗ್ಯವಾಗಿ ಇದ್ದುಕೊಂಡೇ ಹೋದರು. ಬೇರೆ ಬೇರೆ ಅಡುಗೆಯವರು ಮಕ್ಕಳಿಗೆ ಅಡುಗೆ ಮಾಡಿ ಹೋಗಿದ್ದಾರೆ. ಮಕ್ಕಳ ಆರೋಗ್ಯವಂತಿಕೆಗೆ ಮುಖ್ಯ ಕಾರಣ ಕರುಣಾಗೃಹದ ಅಡುಗೆಯ ಮೇಲೆ ಇದ್ದ ಗಿರಿಜಮ್ಮನವರ ಮೇಲ್ವಿಚಾರಣೆ. ಒಳ್ಳೆಯ ಪದಾರ್ಥವನ್ನೇ ತರುವುದು ಅವರ ಜಾಯಮಾನ. ತಂದ ಪದಾರ್ಥವನ್ನು ರುಚಿಕಟ್ಟಾದ ಮತ್ತು ಆರೋಗ್ಯಪೂರ್ಣವಾದ ರೀತಿಯಲ್ಲಿ ಅಡುಗೆ ಮಾಡಬೇಕೆಂಬುದೇ ಅವರ ಧ್ಯೇಯ. ಕರುಣಾಗೃಹದ ಹಳೆಯ ಮಕ್ಕಳೆಲ್ಲ ಇಂದಿಗೂ ಕೂಡ ಅಮ್ಮನ ಊಟದ ರುಚಿಯನ್ನು ಮರೆತಿಲ್ಲ. ಆ ಊಟದ ರುಚಿಯ ಹಿನ್ನೆಲೆಯಲ್ಲಿ ಮಕ್ಕಳು ತಪ್ಪು ಮಾಡಿದಾಗ ಅಮ್ಮ ಕೋಪದಲ್ಲಿ ಹೇಳಿರಬಹುದಾದ ಮಾತು ನೇಪಥ್ಯಕ್ಕೆ ಸೇರಿದೆ.

(ಮುಂದುವರಿಯುವುದು...)

* * *

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

ಶ್ರೀ ಜಿ.ಆರ್.ಲಕ್ಷ್ಮಣ್‌ರಾವ್, ಡಾ.ಸಿ.ಪಿ.ರವಿಚಂದ್ರ,
ಡಾ. ಸಿ.ಜಿ.ಉಷಾದೇವಿ – ಮೈಸೂರು
ಶ್ರೀ ಎಚ್.ಆರ್.ಚಲುವರಾಜ್, ಎಂ.ಜಿ.ಶಿವರಾಂ – ಬೆಂಗಳೂರು
ಶ್ರೀ ತಮ್ಮಣ್ಣ ಬುದನಿ – ಬಾಗಲಕೋಟೆ
ಶ್ರೀ ಬಿಸಪ್ಪಗೌಡರು – ಕೋಲಾರ
ಶ್ರೀ ಮೋಹನಕುಮಾರ್ – ಶ್ರವಣಬೆಳಗೊಳ
ಶ್ರೀ ಎಚ್.ಎನ್.ರಮೇಶ್ – ಮಂಡ್ಯ

ಇವರು ಪತ್ರಿಕೆಯ ಚಂದಾ ನವೀಕರಿಸಿದ್ದಕ್ಕಾಗಿ ಹಾಗೂ ಹೊಸದಾಗಿ ಪತ್ರಿಕೆಗೆ ಚಂದಾದಾರರಾದ,

ಶ್ರೀ ಎಚ್.ಕೆ.ಚಂದ್ರಶೇಖರ್, ಶ್ರೀ ಆರ್.ವಿಜಯ್‌ಕುಮಾರ್ – ಬೆಂಗಳೂರು
ಶ್ರೀ ರಮೇಶ.ಸ.ಕಿಕ್ಕೇರಿ, ಶ್ರೀ ಡಿ.ಮಾದೇಗೌಡರು – ಮೈಸೂರು
ಶ್ರೀ ಎಂ.ಬಿ.ಶೇಖರ್ – ಮಂಡ್ಯ

ಇವರಿಗೆ ಕೃತಜ್ಞತೆಗಳು.

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸಧ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು ಮುಖ್ಯವಾಗಿ, ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ 'ಜನಪದ ವಿಚಾರ' ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜಹಿತ ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದ್ದೇವೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳ ಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಗಳನ್ನು ಬರೆದು ಆಯಾ ತಿಂಗಳ ೧೫ ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

–ಸಂಪಾದಕರು

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ
(–ಸಂಪಾದಕರು)

ತೆರೆದ–ಅಂಚೆ

KA / SK / MND / 470 / 2009-2011
Regd. no. KAR / KAN / 2000 / 3820

ಶ್ರೀಮತಿ/ ಶ್ರೀ..

....

....

jANAPADA VICHARA
Kannada Monthly Digest Edited Printed and Published by Surendra Koulagi at Janapada Seva Trust Melkote, Dist- Mandya – 571431 Phone: 08236-316344 e-mail : janapada@yahoo.com web : janapada.net
Printed at Sanketh, Mudrana, Melkote.